ತ್ರೈಮಾಸಿಕ

ಸಂಚಿಕೆ 57

ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸೆಪ್ಟೆಂಬರ್, ೨೦೨೬



ಶ್ರಾವಣ ಸಂಧ್ಯಾ...

KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

ಪರಿವಿಡಿ

- ಸಂಪಾದಕೀಯ.....3
- ಸಂಪಾದಕೀಯ ತಂಡ.....4
- ಅಧ್ಯಕ್ಷರ ನುಡಿ.....5
- ಜ್ಞಾನ ದೀವಿಗೆ.....6
- ಗಣೇಶೋತ್ಸವ.....7
- ಆರಾಧನೆ 13
- ಅಕ್ಕ ಸಮ್ಮೇಳನ.....15
- ಅನಿಸಿಕೆ.....17
- ಅನುಭವ.....18
- ನೆನಪುಗಳು 20
- ಕಲೆ 21

ಕಥಾ ಸಂಕಲನ

- ಜನಿವಾರ.....23

ಕವನ ಸಂಕಲನ

- ಬದಲಾಗುವ ಕಾಲ.....30
- ದೇವರು ನಗುವುದಿಲ್ಲ.....31

ಅಡಿಗೆ ಅರಮನೆ

- ಉದ್ದಿನ ಕಡುಬು.....33
- ಹಾಲು ಒಬ್ಬಟ್ಟು 34
- ಸ್ವಯಂಪಾಕದ ಸಂಭ್ರಮ.....35
- ಕೋಸಂಬರಿ.....36
- ಸಿಹಿ ಅವಲಕ್ಕಿ.....37
- ಬೇಸನ್ ಲಾಡು.....38
- ಟಿಣ್ಣರ ಲೋಕ.....39
- ಕ್ಯಾಮರಾ ಕಣ್ಣಲ್ಲಿ.....45
- ಹಿಂದಿನ ಸಂಚಿಕೆಗಳು.....47



ಹಬ್ಬ ಹರಿದಿನ

ಬೇಸಿಗೆಯ ಬಿಸಿಲಿನ ತಾಪ ಮುಗಿಯುತ್ತಿದ್ದ ಹಾಗೆ ಎಲೆ ಉದುರುವ ಕಾಲ ಶುರು ಆಗುತ್ತೆ. ಬೇಸಿಗೆ ರಜ ಮುಗಿಯುತ್ತಿದ್ದ ಹಾಗೆ ಶಾಲೆಗೆ ಹೋಗುವ ತಯಾರಿ ಒಂದು ಕಡೆ ಯಾದರೆ ಹಬ್ಬಗಳ ಸಾಲು ಇನ್ನೊಂದು ಕಡೆ. ಮೊದಲ ಹಬ್ಬ, ಗೌರಿ ಗಣೇಶ , ಎಲ್ಲರಿಗೂ ಗಣೇಶ ಗೌರಿ ಹೆಸರಿನಲ್ಲಿ ಕಡಬು , ಹೋಳಿಗೆ ತಿನ್ನುವ ಆತುರ, ನಾವು ಚಿಕ್ಕವರಾಗಿದ್ದಾಗ ೧೦೧ ಗಣೇಶ ಮೂರುತಿಗಳನ್ನು ನೋಡುವುದು ಒಂದು ಪದ್ದತಿ. ಆದಕ್ಕೆ ಒಂದು ಸವಾಲು ಕೂಡ, ರಾತ್ರಿ ಚಂದ್ರನನ್ನು ನೋಡದೆ ಅಕ್ಕ ಪಕ್ಕದ ಮನೆಗಳಿಗೆ ಹೋಗಿ, ಗಣೇಶ ಗೌರಿ ಅಲಂಕಾರ ನೋಡಿ, ಮನೆಯವರು ಕೊಟ್ಟ ಪ್ರಸಾದ ತಿಂದು ಮುಂದಿನ ಮನೆಗೆ ಗಣೇಶ ಇಟ್ಟಿದ್ದೀರ ಎಂದು ನೆಲ ನೋಡಿ ಕೊಂಡು ಹೋಗುವುದು. ಎಲ್ಲರಿಗೂ ಗೊತ್ತಿದೆ ಗಣೇಶ ಚತುರ್ಥಿಯಲ್ಲಿ ಚಂದಿರನ ನೋಡಿದರೆ ಸುಳ್ಳು ಅಪವಾದ ಬರುತ್ತದೆಯೆಂದು. ನಮ್ಮ ಹಬ್ಬಗಳು, ಆಚಾರ ವಿಚಾರಗಳ ಜೊತೆಗೆ ಋತುವಿಗೆ ತಕ್ಕಂತೆ ಆಹಾರ ಪದ್ದತಿ ಕೂಡ ಇದೆ. ಗಣೇಶ ಗೌರಿಗೆ ಕಡಬು, ಒಬ್ಬಟ್ಟು ಸೇರಿ ೨೧ ರಿಂದ ೧೦೧ ರವರಗೆ ತಿಂಡಿಗಳನ್ನು ಮಾಡುವುದು. ಕೃಷ್ಣಾಷ್ಟಮಿಗೆ ಹಲವಾರು ತಿಂಡಿ ಮಾಡಿ ಬಂದು ಬಳಗದವರನ್ನು ಅರಿಶಿನ ಕುಂಕುಮಕ್ಕೆ ಕರೆಯುವುದು. ನವರಾತ್ರಿ ಬೊಂಬೆಗಳನ್ನು ಕೂರಿಸಿ ಅರಿಶಿನ ಕುಂಕುಮಕ್ಕೆ ಕರೆದು, ಕೋಸಂಬರಿ ಅಥವಾ ಕಡಲೆ ಕಾಳು ಉಸಲಿ ಕೊಡುವುದು. ದೀಪಾವಳಿ ಹಬ್ಬದಲ್ಲಿ ಪಟಾಕಿ ಹೊಡೆಯುವುದು ಗಂಡು ಮಕ್ಕಳಿಗೆ ಅತ್ಯಂತ ಸಂಭ್ರಮದ ವಿಷಯ. ಹೊಸದಾಗಿ ಮದುವೆ ಆದ ಮಗಳು ಅಳಿಯನನ್ನು ಮನೆಗೆ ಕರೆದು ಉಪಚಾರ ಮಾಡುವುದು, ಸಂಕ್ರಾಂತಿ ಸಮಯದಲ್ಲಿ, ಎಳ್ಳು ಬೆಲ್ಲ ಬೀರುವುದು, ಶಿವರಾತ್ರಿಗೆ ಉಪವಾಸ ಮತ್ತು ಜಾಗರಣೆ, ಯುಗಾದಿ ಹಬ್ಬದಲ್ಲಿ ಬೇವು ಬೆಲ್ಲ ತಿಂದು ಜೀವನದಲ್ಲಿ ಕಷ್ಟ ಸುಖಗಳನ್ನು ಸಮಾನವಾಗಿ ತೆಗೆದುಕೊಳ್ಳ ಬೇಕು ಎಂಬ ಸಂದೇಶವನ್ನು ಚಿಕ್ಕವಯಸ್ಸಿನಲ್ಲೇ ಮಕ್ಕಳಿಗೆ ಹೇಳಿ ಕೊಡುವುದು. ಈ ಆಚರಣೆಗಳು ಬದುಕಿನ ಜಂಜಾಟಗಳ ಬರಡು ಜೀವನದ ನಡುವೆ ಒಂದು ಓಯಸಿಸ್ ಅಂದರೆ ತಪ್ಪಾಗಲಾರದು. ಒಂದು ರೀತಿ forced socialization ಕೂಡ. ಈಗಿನ electronic ಯುಗದಲ್ಲಿ ಮುಖಾಮುಖಿ ಸಂಪರ್ಕ ಅತ್ಯಂತ ಅವಶ್ಯಕತೆ ಇರುವುದರಿಂದ ಈ ರೀತಿ ಆಚರಣೆ ಪದ್ದತಿ ಗಳು ಅತ್ಯಾವಶ್ಯಕ. ಒಂದು ಸಮಾಜವು ಆರೋಗ್ಯಕರವಾಗಿರ ಬೇಕಾದರೆ ನಮ್ಮ ಅಕ್ಕ ಪಕ್ಕದವರ ಸ್ನೇಹ, ಒಡನಾಟ ತುಂಬಾ ಮುಖ್ಯ ಎನ್ನುವ ಸಂದೇಶವನ್ನು ಸಾರುವುದೇ ಈ ಎಲ್ಲಾ ಆಚರಣೆಗಳ ಹಿಂದಿರುವ ಉದ್ದೇಶ.

ಧನ್ಯವಾದಗಳು

ರಾಗಿಣಿ ದರ್ಶನ್

ಸಾಹಿತ್ಯ ಬೃಂದಾವನ

"ಸಂಕಲ್ಪ" ತಂಡ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ.

ಸಂಪಾದಕೀಯ ತಂಡ



ಶ್ರೀವಿದ್ಯಾ ಪ್ರಶಾಂತ್
ಪ್ರಧಾನ ಸಂಪಾದಕರು



ರೋಹಿಣಿ ಮಹೇಶ್
ಸಂಚಿಕೆ ವಿನ್ಯಾಸ



ರಾಗಿಣಿ ದರ್ಶನ್
ವಿಷಯ ನಿರ್ವಹಣೆ



ಪಲ್ಲವಿ ಮಂಜುನಾಥ್
ವಿಷಯ ನಿರ್ವಹಣೆ



ವಾಣಿ ಗಿರೀಶ್
ವಿಷಯ ನಿರ್ವಹಣೆ



ಸೌಮ್ಯ ರವಿ
ವಿಷಯ ನಿರ್ವಹಣೆ

ಮುಖಪುಟ ಚಿತ್ರ ಕೃಪೆ : ಶ್ರೀವಿದ್ಯಾ ಪ್ರಶಾಂತ್



ಅಧ್ಯಕ್ಷರ ನುಡಿ

ಬೃಂದಾವನದ ಎಲ್ಲ ಅಭಿಮಾನಿಗಳಿಗೂ ಶ್ರೀ ಗಣೇಶೋತ್ಸವದ ಶುಭಾಶಯಗಳು !!
ಗಣಪತಿಯ ಆಶೀರ್ವಾದ ನಮ್ಮ-ನಿಮ್ಮೆಲ್ಲರ ಮೇಲೆ ಸದಾ ಇರಲಿ.

ಕಳೆದ ಮೂರು ತಿಂಗಳಲ್ಲಿ ಬೇಸಿಗೆ ರಜೆ ಕಳೆದು ಶಾಲೆಗಳು ಪ್ರಾರಂಭವಾಗಿದ್ದು, ನಮ್ಮ ಎಲ್ಲಾ ಬೃಂದಾವನ ಕನ್ನಡ ಶಾಲಾ ಮಕ್ಕಳಿಗೆ ಹೊಸ ವರ್ಷ, ಹೊಸ ಹುರುಪನ್ನು ತಂದು, ಅವರ ಕನ್ನಡ ಕಲಿಕೆಯ ಪ್ರಯಾಣ ಪ್ರಗತಿ ಪಥದತ್ತ ಹೋಗಲೆಂದು ಸಂಕಲ್ಪ ತಂಡ ಶುಭ ಕೋರುತ್ತದೆ.
ಈ ವರ್ಷದ ಬೃಂದಾವನ ಗಣೇಶೋತ್ಸವ ಎಂದೂ ಕಾಣದ ಹೊಸ ರೋಚಕ ಅನುಭವದೊಂದಿಗೆ ವಿಜೃಂಭಣೆಯಿಂದ ನಡೆಯಿತು. ಸುಮಾರು ೪೫೦ಕ್ಕೂ ಹೆಚ್ಚು ಜನ ಸೇರಿ ನಡೆದ ಕಾರ್ಯಕ್ರಮ, ನಾರ್-ಈಸ್ಟರ್ ಬಿರುಗಾಳಿಗೆ ಸಿಕ್ಕಿ ನಮ್ಮ ಕಾರ್ಯಕ್ರಮ ನಡೆಯಬೇಕಿದ್ದ ಶಾಲೆಯಲ್ಲಿ ವಿದ್ಯುಚ್ಛಕ್ತಿ ಕಡಿದು ಕಾರ್ಯಕ್ರಮವೇ ನಿಲ್ಲಿಸಬಹುದಾಗಿದ್ದ ಸಂದರ್ಭದಲ್ಲಿ, ಗಣಪತಿಯ ವಿಶೇಷ ಅನುಗ್ರಹದಿಂದ ಹತ್ತಿರದ ಇನ್ನೊಂದು ಶಾಲೆ ಸಿಕ್ಕಿ, ಎಲ್ಲ ಕಾರ್ಯಕ್ರಮವೂ ಸುಸೂತ್ರವಾಗಿ ನಡೆಯಿತು. ಗಣಪತಿಯ ವಿಶೇಷ ಪೂಜೆಯನ್ನು ಸಂಕಲ್ಪ ತಂಡದ ಪದಾಧಿಕಾರಿಗಳು ನಡೆಸಿದರು. ಗಣಪತಿ ಹಾಗೂ ಚಾಮುಂಡೇಶ್ವರಿ ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಭರ್ಜರಿ ಬಾಳೆ ಎಲೆ ಊಟ, ಸ್ನೇಹ ನಾರಾಯಣ್ ಹಾಗೂ ಯೋಗೇಶ್ ಅವರ ನೃತ್ಯ, ಹಾಗೂ ವಿದೂಷಿ ಶ್ರೀಮತಿ ಸಂಗೀತ ಕಟ್ಟಿ ಅವರಿಂದ ಅಮೋಘ ಸಂಗೀತ ಕಾರ್ಯಕ್ರಮಗಳು ಎಲ್ಲರ ಮನಸೂರೆಗೊಂಡಿತು. ಕೊನೆಗೆ ರಾತ್ರಿ ಊಟದ ವ್ಯವಸ್ಥೆಯೊಂದಿಗೆ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು.
ಮತ್ತೊಂದು ವಿಶೇಷ – ಅಕ್ಕ ೨೫ನೇ ರಜತ ಮಹೋತ್ಸವ ಕನ್ನಡ ಸಮ್ಮೇಳನ ಫಿಲಡೆಲ್ಫಿಯಾದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮೂರು ದಿನಗಳ ಕಾಲ ಸುಮಾರು ೪೦೦೦ಕ್ಕೂ ಹೆಚ್ಚು ಜನ ಸೇರಿ ಆಚರಿಸಿದ ಈ ಕನ್ನಡ ಹಬ್ಬ, ದೇಶ-ವಿದೇಶಗಳಿಂದ ಎಲ್ಲ ಕನ್ನಡಿಗರು ಪ್ರೀತಿ-ಅಭಿಮಾನದಿಂದ ಪಾಲ್ಗೊಂಡು ಮೂರು ದಿನಗಳ ಕಾರ್ಯಕ್ರಮ ಮರೆಯಲಾರದ ಅನುಭವವನ್ನು ತಂದುಕೊಟ್ಟಿತು. ಶ್ರೀ ಆದಿ ಚುಂಚನಗಿರಿಯ ನಿರ್ಮಲಾನಂದ ಸ್ವಾಮೀಜಿ, ಶ್ರೀ ತರಳುಬಾಳು ಮಠದ ಸಿರಿಗೆರೆ ಸ್ವಾಮಿಗಳು ಹಾಗೂ ಮೈಸೂರು ಮಹಾರಾಜರು ಹಾಗೂ ಲೋಕಸಭಾ ಸದಸ್ಯರಾದ ಯದುವೀರ್ ಒಡೆಯರ್ ಅವರ ಉಪಸ್ಥಿತಿಯಲ್ಲಿ, ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಕೇಂದ್ರೀಯ ಸಚಿವರಾದ ಶ್ರೀ ಕುಮಾರಸ್ವಾಮಿ ಹಾಗೂ ಕರ್ನಾಟಕದ ಹಲವಾರು ಮಂತ್ರಿಗಳು ಉಪಸ್ಥಿತರಿದ್ದರು. ಮೂರು ದಿನಗಳ ಭರ್ಜರಿ ಊಟ, ಶ್ರೀ ವಿದ್ಯಾಭೂಷಣ್, ಶ್ರೀ ರಾಜೇಶ್ ಕೃಷ್ಣನ್, ನವೀನ್ ಸಜ್ಜು ಮತ್ತು ಇನ್ನೂ ಹಲವಾರು ಸಂಗೀತಗಾರರ ಕಾರ್ಯಕ್ರಮಗಳು ಮನಸೂರೆಗೊಂಡಿತು. ಹಲವಾರು ಸಾಹಿತ್ಯ ಕಾರ್ಯಕ್ರಮಗಳು, ಮೆರವಣಿಗೆ, ಯೋಗ, ನೃತ್ಯ, ಬಾಸ್ಟನ್ ಬ್ರದರ್ಸ್ ಕಾರ್ಯಕ್ರಮ – ಎಲ್ಲವೂ ಸುಂದರವಾಗಿ ಮೂಡಿಬಂದಿತು. ಅಕ್ಕ ಸ್ಮರಣ ಸಂಚಿಕೆ ಬಿಡುಗಡೆಯಾಯಿತು. ಎಲ್ಲ ಮುಗಿದು ರಜತ ಮಹೋತ್ಸವಕ್ಕೆ ತೆರೆ ಬಿದ್ದಾಗ ಮತ್ತೊಮ್ಮೆ ಬೇಗ ಬರಲಿ ಎಂದು ಬೀಳ್ಕೊಟ್ಟೆವು.

ಮತ್ತೊಮ್ಮೆ ಮುಂದಿನ ಸಂಚಿಕೆಯಲ್ಲಿ ಭೇಟಿಯಾಗೋಣ.

ನಿಮ್ಮ,
ಸುನೇಲ್ ಹುಲಿಕೆರೆ,
ಅಧ್ಯಕ್ಷರು,
"ಸಂಕಲ್ಪ ತಂಡ",
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ.



ಶ್ರೀ ಯೋಗೀಂದ್ರ ಭಟ್ ಉಳಿ
ಶ್ರೀ ಕೃಷ್ಣ ವೃಂದಾವನ, ನ್ಯೂ ಜೆರ್ಸಿ

ಮೌನದ ಮಹತ್ವ

ಪ್ರತಿಯೊಂದಕ್ಕೂ ಪ್ರತಿಕ್ರಿಯೆ ನೀಡಲು ಹೊರಟರೆ ನಮ್ಮ ಮಾತುಗಳು ಮಹತ್ವವನ್ನು ಕಳೆದುಕೊಳ್ಳುತ್ತವೆ. ನಾವು ವೃಥಾ ವಾಚಾಳಿಗಳೆನಿಸಿಕೊಳ್ಳುತ್ತೇವೆ. ಮುಂದೆ ನಮ್ಮ ಮಾತುಗಳು ಮಾತ್ರವಲ್ಲ, ಗಂಭೀರವಾದ ಸಲಹೆ ಸೂಚನೆಗಳೂ ನಿರ್ಲಕ್ಷಕ್ಕೊಳಗಾಗುತ್ತವೆ. ಆದ್ದರಿಂದ ಯಾವಾಗ ಮಾತನಾಡಬೇಕು, ಎಷ್ಟು ಮಾತನಾಡಬೇಕು ಮತ್ತು ಯಾವಾಗ ಮೌನದಿಂದ ಇದ್ದರೆ ಒಳ್ಳೆಯದು ಎಂಬ ಎಚ್ಚರಿಕೆಯಲ್ಲಿ ನಾವಿರಬೇಕಾಗುತ್ತದೆ. ಕೆಲವೊಂದು ಸಂದರ್ಭಗಳು ನಮ್ಮ ಭಾವನೆಗಳನ್ನು ಕೆರಳಿಸಿ ನಮ್ಮನ್ನು ಮಾತನಾಡುವಂತೆ ಪ್ರಚೋದಿಸಬಹುದು. ಆಗ ನಾವೇ ನಮ್ಮನ್ನು ನಿಯಂತ್ರಿಸಿಕೊಳ್ಳಬೇಕು. ಮತ್ತು ಎಲ್ಲದಕ್ಕಿಂತಲೂ ಮುಖ್ಯವಾಗಿ ನಮ್ಮ ಪ್ರತಿಕ್ರಿಯೆಗಳು ಕೇವಲ ನಮ್ಮ ಅಭಿಪ್ರಾಯವನ್ನಷ್ಟೇ ಅವಲಂಬಿಸಿರುತ್ತವೆ ಎಂಬ ಸತ್ಯವನ್ನು ನಾವು ಅರಿತುಕೊಂಡಿರಬೇಕು. ಇತರರ ಮಾತುಗಳನ್ನೂ ಆಲಿಸುವ ತಾಳ್ಮೆಯನ್ನು, ಸಾವಧಾನತೆಯನ್ನು ರೂಢಿಸಿಕೊಳ್ಳಬೇಕು.

ಕೆಲವು ಸಂದರ್ಭಗಳಲ್ಲಿ ಮಾತಿಗಿಂತ ಮೌನವೇ ಹೆಚ್ಚು ಮೌಲ್ಯಯುತವಾಗಿರುತ್ತದೆ. ನಮ್ಮ ಭಾವನೆಗಳನ್ನು ಆ ಕ್ಷಣದಲ್ಲಿ ವ್ಯಕ್ತಪಡಿಸುವುದಕ್ಕಿಂತ ಸುಮ್ಮನೆ ಸಹಿಸಿಕೊಂಡಿರುವುದೇ ನಮಗೆ ಹಿತಕಾರಿಯಾಗಿರುತ್ತದೆ. ಅದರಿಂದ ನಮಗೆ ಪರಿಸ್ಥಿತಿಯನ್ನು ಚೆನ್ನಾಗಿ ವಿಮರ್ಶಿಸಲು ಮತ್ತು ಅನೇಕ ಆಯಾಮಗಳಿಂದ ಯೋಚಿಸಿ ಸೂಕ್ತ ನಿರ್ಣಯಗಳನ್ನು ಚಿಂತಿಸಲು ಸಾಕಷ್ಟು ಸಮಯವೂ ಸಿಗುತ್ತದೆ. ಆತುರದ ಪ್ರತಿಕ್ರಿಯೆ ಮತ್ತು ಮಾತುಗಳು ಯಾವತ್ತಿಗೂ ಅಪಾಯಕಾರಿ. ನಮ್ಮ ಮನಸ್ಸನ್ನೂ ಕೆಡಿಸುವುದಲ್ಲದೆ ಅನಗತ್ಯವಾಗಿ ಇತರರ ಭಾವನೆಗಳನ್ನೂ ಕೆರಳಿಸಿಬಿಡುತ್ತವೆ. ಆದರೆ ಸಾಂದರ್ಭಿಕ ಮತ್ತು ಸಮಯೋಚಿತವಾದ ಮೌನದಿಂದ ಯಾವ ಅಪಾಯವೂ ಇರುವುದಿಲ್ಲ.

ಮಾತಿನ ನಿಗ್ರಹಕ್ಕಿಂತಲೂ ಮೊದಲು ನಮ್ಮ ಮನಸ್ಸಿನ ನಿಗ್ರಹವಾಗಬೇಕು. ಏಕೆಂದರೆ ಮಾತಿನ ಮೂಲಸ್ಥಾನ ಮನಸ್ಸೇ ತಾನೆ? ಮನಸ್ಸಿನಲ್ಲಿ ಮೂಡುವ ಯೋಚನೆಗಳೇ ನಮ್ಮ ಮಾತುಗಳ ರೂಪದಲ್ಲಿ ಹೊರಬರುವುದು. ಸದಾ ಶುದ್ಧವಾದ ಚಿಂತನೆಗಳಿದ್ದರೆ ಮಾತ್ರ ಮನಸ್ಸು ಶುದ್ಧಿಯಾಗಿರುತ್ತದೆ. ಬುದ್ಧಿ ಎನ್ನುವ 'ಫಿಲ್ಟರ್'ಕೂಡ 'ಆಕ್ಟಿವ್' ಆಗಿರುತ್ತದೆ. ಆಗ ನಮ್ಮ ಮಾತುಗಳೂ ಮೌಲ್ಯಯುತವಾಗಿ ಮೂಡಿಬರುತ್ತವೆ.

ಮೌನವೆಂದರೆ ಮತ್ತೇನೂ ಅಲ್ಲ. ಮಾತುಗಳನ್ನು ಮೂಲದಲ್ಲೇ ಅಂದರೆ ನಮ್ಮ ಮನಸ್ಸಿನೊಳಗೇ ಹಿಡಿದಿಟ್ಟುಕೊಳ್ಳುವುದು. ಸ್ವಗತ ಸಂಭಾಷಣೆ. ಬೇರೆಯವರಿಗೆ ಕೇಳಿಸದಂತೆ ನಮ್ಮ ಜೊತೆಗೆ ನಾವೇ ಮಾತಾಡಿಕೊಳ್ಳುವುದು. ಈ ಅಭ್ಯಾಸವು ನಮಗೆ ನಿಜವಾಗಿಯೂ ಶ್ರೇಯಸ್ಕರವಾಗಿರುತ್ತದೆ. ದೊಡ್ಡಸಭೆಯಲ್ಲಿ ಒಳ್ಳೆಯ ರೀತಿಯಲ್ಲಿ ಪರಿಣಾಮಕಾರಿಯಾಗಿ ಭಾಷಣ ಮಾಡಬಯಸುವವರು ಸಾಕಷ್ಟು ಮುಂಚಿತವಾಗಿ ಏಕಾಂತದಲ್ಲಿ ಪ್ರಾಕ್ಟಿಸ್ ಮಾಡಿಕೊಳ್ಳುವಂತೆ. ಜೊತೆಗೆ ನಮ್ಮ ಮನಸ್ಸಿನ ಸ್ವಗತವನ್ನು ನಮ್ಮ ಬುದ್ಧಿಯೂ ವಿಶ್ಲೇಷಿಸುವುದರಿಂದ ತಿದ್ದಿಕೊಳ್ಳುವುದಕ್ಕೂ ನಮಗೆ ಅವಕಾಶವಿರುತ್ತದೆ. ಒಟ್ಟಿನಲ್ಲಿ ಮೌನಪ್ರಯೋಗದ ಜೊತೆಗಿನ ಅಂತರಂಗದ ವಿಮರ್ಶೆಯಿಂದ ನಮ್ಮ ಮಾತು ಮತ್ತು ಮನಸ್ಸು ಎರಡೂ ಶುದ್ಧವಾಗಿ ಬಿಡುತ್ತವೆ.

ಕೆಲವೊಂದು ಸಾಂದರ್ಭಿಕವಾದ ವಾದ-ವಿವಾದಗಳಿಗೆ ನಮ್ಮ ಮಾತಿನ ಪ್ರತಿಕ್ರಿಯೆಯ ಅಗತ್ಯವೇ ಇರುವುದಿಲ್ಲ. ಕೆಲವೊಂದಕ್ಕೆ ಕಾಲವೇ ಉತ್ತರಕೊಡುತ್ತದೆ. ಆಗ ನಾವು ಸಾಕಷ್ಟು ಯೋಚಿಸದೆ ಅನಗತ್ಯವಾಗಿ ಆಡಿದ ಮಾತುಗಳಿಗೆ ನಾವೇ ಹೊಣೆಗಾರರಾಗಬೇಕಾಗುತ್ತದೆ. ಭಾರೀ ಬೆಲೆಯನ್ನು ತೆರಬೇಕಾಗುತ್ತದೆ. ಅದು ನಮ್ಮ ಬಗೆಗಿನ ಸದಭಿಪ್ರಾಯಗಳನ್ನು ಮಾತ್ರವಲ್ಲ ಕೆಲವೊಂದು ಅತ್ಯಮೂಲ್ಯ ಸೌಹಾರ್ದತೆಯನ್ನು ಮತ್ತು ಉತ್ತಮ ಬಾಂಧವ್ಯಗಳನ್ನೂ ಹಾಳುಮಾಡಿಬಿಡಬಹುದು. ಆದ್ದರಿಂದ ನಮ್ಮ ನಾಲಗೆ ನಮ್ಮ ಹಿಡಿತದಲ್ಲಿರುವುದು ಬಹಳ ಮುಖ್ಯ.. 'ಲೂಸ್ ಟಾಕ್ ಕಿಲ್ಸ್ ದ ರಿಲೇಷನ್ ಶಿಪ್ಸ್'

ಎಲ್ಲದಕ್ಕಿಂತಲೂ ಮುಖ್ಯವಾಗಿ ಹದಿಹರೆಯದ ಮಕ್ಕಳ ಪೋಷಕರು ತಮ್ಮ ಮಾತಿನ ಮೌಲ್ಯವನ್ನು ಉಳಿಸಿಕೊಳ್ಳಬೇಕೆಂದರೆ ಮನೆಯಲ್ಲಿಯೇ ಮೌನದ ಪ್ರಯೋಗವನ್ನು ಮಾಡಬೇಕು. ಹೇಳುವುದಕ್ಕಿಂತ ಹೆಚ್ಚಿನ ಸಮಯವನ್ನು ಕೇಳುವುದಕ್ಕೆ ಅಂದರೆ ಅವರ ಅಭಿಪ್ರಾಯಗಳನ್ನು ಕೇಳುವುದಕ್ಕೆ ವಿನಿಯೋಗಿಸಬೇಕು. ನಮ್ಮ ಮಕ್ಕಳೂ ಬೆಳೆಯುತ್ತಿದ್ದಾರೆ, ಪ್ರಬುದ್ಧರಾಗುತ್ತಿದ್ದಾರೆ ಎಂಬುವುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಅವರಿಗೆ ಪದೇ ಪದೇ ಸಲಹೆಗಳನ್ನು ಕೊಟ್ಟು, ಮತ್ತೆ ಮತ್ತೆ ಬುದ್ಧಿಹೇಳಿ ಅವರ ದೃಷ್ಟಿಯಲ್ಲಿ ಕುತ್ಸಿತರಾಗುವುದಕ್ಕಿಂತ, ತಾತ್ಸಾರಕ್ಕೊಳಗಾವುದಕ್ಕಿಂತ ಸಂದರ್ಭೋಚಿತವಾದ ಲೆಕ್ಕದ ಮಾತುಗಳನ್ನಾಡಿ ತಮ್ಮ ಗೌರವವನ್ನು ಉಳಿಸಿಕೊಳ್ಳುವುದೇ ಹೆತ್ತವರ ಬುದ್ಧಿವಂತಿಕೆ.



ಪೂರ್ಣಿಮಾ ರಮೇಶ್ ಭಟ್

ಬೃಂದಾವನ ಗಣೇಶೋತ್ಸವ – ಭಕ್ತಿ, ಸಂಭ್ರಮ ಮತ್ತು ಕನ್ನಡತನದ ಸೊಬಗು

ನ್ಯೂ ಜರ್ಸಿಯ ಬೃಂದಾವನ ಕನ್ನಡ ಕೂಟದ ವತಿಯಿಂದ ಸೆಪ್ಟೆಂಬರ್ 27ರಂದು ಗಣೇಶೋತ್ಸವವನ್ನು ಅತ್ಯಂತ ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು.

ಕಾರ್ಯಕ್ರಮವು ಗಣೇಶ ಪೂಜೆಯೊಂದಿಗೆ ಆರಂಭವಾಯಿತು. ಸಂಕಲ್ಪ ತಂಡದ ಸದಸ್ಯರು ಗಣಪತಿ ಸಂಕಲ್ಪವನ್ನು ನೆರವೇರಿಸುವ ಮೂಲಕ ಪೂಜೆಗೆ ವಿಧಿವತ್ತಾಗಿ ಚಾಲನೆ ನೀಡಿದರು. ಈ ಪೂಜಾ ಕಾರ್ಯಕ್ರಮವನ್ನು ಶ್ರೀ ಬಸವರಾಜ ಹಿರೇಮಠ ಹಾಗೂ ಶ್ರೀ ವಿರಾಜ ಆಚಾರ್ಯ ಅವರು ಶಾಸ್ತ್ರೋಕ್ತ ವಿಧಿವಿಧಾನಗಳೊಂದಿಗೆ ನೆರವೇರಿಸಿಕೊಟ್ಟರು. ಭಕ್ತಿಭಾವದಿಂದ ನಡೆದ ಈ ಪೂಜೆ ಅತ್ಯಂತ ಅದ್ಭುತವಾಗಿ ಮೂಡಿಬಂದಿತು.

ಗಣಪತಿಯ ಆರಾಧನೆ, ಮಂತ್ರೋಚ್ಚಾರಣೆ ಹಾಗೂ ಪೂಜಾ ವಿಧಿವಿಧಾನಗಳು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದವು. ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗಣಪತಿಯ ಕೃಪೆಗೆ ಪಾತ್ರರಾದರು. ಇಡೀ ಕಾರ್ಯಕ್ರಮವು ಭಕ್ತಿ, ಸಂಭ್ರಮ ಮತ್ತು ಕನ್ನಡ ಸಂಸ್ಕೃತಿಯ ಸೊಬಗಿನಿಂದ ಕಂಗೊಳಿಸಿತು.

ಆನಂತರ ಗಣೇಶ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಯಿತು. ಹೊರಗಡೆ ಭಾರೀ ಮಳೆ ಹಾಗೂ ಗಾಳಿ ಇದ್ದ ಕಾರಣ, ಮೆರವಣಿಗೆಯನ್ನು ಶಾಲೆಯ ಜಿಮ್ ಒಳಾಂಗಣದಲ್ಲಿ ನಡೆಸಲು ನಿರ್ಧರಿಸಲಾಯಿತು.

ಜಿಮ್ ಸುತ್ತಲೂ ನಡೆದ ಈ ಮೆರವಣಿಗೆ ಅತ್ಯಂತ ಅದ್ಧೂರಿಯಾಗಿ ಹಾಗೂ ವೈಭವಪೂರ್ಣವಾಗಿ ಮೂಡಿಬಂದಿತು. ಭಕ್ತರು ಗಣೇಶನ ಮೂರ್ತಿಯನ್ನು ಹೊತ್ತುಕೊಂಡು, ಜಯಘೋಷಗಳನ್ನು ಮೊಳಗಿಸುತ್ತಾ, ಮದ್ದಳೆ ಮತ್ತು ತಾಳಗಳ ನಾದದೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಗಣೇಶನನ್ನು ಹೊತ್ತು ಸಾಗುತ್ತಿದ್ದ ಭಕ್ತರ ಉತ್ಸಾಹ, ಮೊಳಗುತ್ತಿದ್ದ ಜೈಕಾರಗಳು ಮತ್ತು ಮದ್ದಳೆಯ ನಾದ ಇಡೀ ವಾತಾವರಣವನ್ನು ಭಕ್ತಿಮಯವಾಗಿಸಿತು.

ಇದರ ಜೊತೆಗೆ, ಸುಂದರವಾಗಿ ಅಲಂಕರಿಸಲ್ಪಟ್ಟ ಪಲ್ಲಕ್ಕಿಯನ್ನು ಹೊತ್ತುಕೊಂಡು ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ವಿಶೇಷ ಆಕರ್ಷಣೆಯಾಗಿತ್ತು. ಕರ್ನಾಟಕದ ವಿವಿಧ ಪ್ರದೇಶಗಳ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಯನ್ನು ಪ್ರತಿಬಿಂಬಿಸುವ ಸಾಂಪ್ರದಾಯಿಕ ಉಡುಗೆ-ತೊಡುಗೆ ಹಾಗೂ ವೇಷಭೂಷಣಗಳನ್ನು ಧರಿಸಿ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದು ಮತ್ತೊಂದು ವಿಶೇಷವಾಗಿತ್ತು.

ಗಣೇಶನ ಮೆರವಣಿಗೆ ಸಾಗುತ್ತಿದ್ದಂತೆ, ಭರತನಾಟ್ಯ ಹಾಗೂ ಬೃಂದಾವನ ಬೆಡಗಿಯರ ಮನಮೋಹಕ ನೃತ್ಯ ಪ್ರದರ್ಶನಗಳು ಎಲ್ಲರ ಗಮನ ಸೆಳೆದವು. ನೃತ್ಯ, ಸಂಗೀತ, ಮದ್ದಳೆಯ ನಾದ ಹಾಗೂ ಭಕ್ತರ ಜಯಘೋಷಗಳ ಸಮ್ಮಿಲನದಿಂದ ಗಣೇಶೋತ್ಸವದ ಮೆರವಣಿಗೆ ಅತ್ಯಂತ ಅದ್ಭುತವಾಗಿ ಹಾಗೂ ಸ್ಮರಣೀಯವಾಗಿ ಮೂಡಿಬಂದಿತು.

ಇದರ ಜೊತೆಗೆ, ಶ್ರೀವಿದ್ಯಾ ಪ್ರಶಾಂತ್ ಅವರು ಮೆರವಣಿಗೆಯ ಸಂಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡು, ಪ್ರತಿಯೊಂದು ವ್ಯವಸ್ಥೆಯನ್ನು ಅತ್ಯಂತ ಅಚ್ಚುಕಟ್ಟಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸಿದರು. ಅವರ ಉತ್ತಮ ಯೋಜನೆ, ಸಂಘಟನಾ ಕೌಶಲ್ಯ ಹಾಗೂ ಪರಿಶ್ರಮದಿಂದ ಮೆರವಣಿಗೆ ಅತ್ಯಂತ ಯಶಸ್ವಿಯಾಗಿ ನಡೆಯಲು ಸಾಧ್ಯವಾಯಿತು. ಮೆರವಣಿಗೆಯ ಪ್ರತಿಯೊಂದು ಹಂತವನ್ನೂ ಅಚ್ಚುಕಟ್ಟಾಗಿ ಸಂಯೋಜಿಸಿ, ಎಲ್ಲರೂ ಉತ್ಸಾಹದಿಂದ ಭಾಗವಹಿಸುವಂತೆ ಮಾಡಿದ ಅವರ ಸೇವೆ ಹಾಗೂ ಪರಿಶ್ರಮವು ವಿಶೇಷವಾಗಿ ಶ್ಲಾಘನೀಯವಾಗಿತ್ತು.

ಮೆರವಣಿಗೆ ಮುಗಿದ ನಂತರ, ಬೃಂದಾವನ ಕನ್ನಡ ಕೂಟದ ಸಂಕಲ್ಪ ತಂಡದ ವತಿಯಿಂದ ಅದ್ಧೂರಿಯಾದ ಬಾಳೆಲೆ ಊಟವನ್ನು ಆಯೋಜಿಸಲಾಗಿತ್ತು. ವಿವಿಧ ರುಚಿಕರವಾದ ಸಾಂಪ್ರದಾಯಿಕ ತಿನಿಸುಗಳನ್ನು ಬಾಳೆ ಎಲೆಯ ಮೇಲೆ ಬಡಿಸಲಾಗಿದ್ದು, ಈ ಊಟವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಬಾಳೆ ಎಲೆಯ ಮೇಲೆ ಬಡಿಸಿದ ಊಟವನ್ನು ಸವಿಯುತ್ತಿದ್ದಂತೆ, ಎಲ್ಲರಿಗೂ ತಮ್ಮ ಊರಿನ ನೆನಪು ಹಾಗೂ ಸಾಂಪ್ರದಾಯಿಕ ಬಾಳೆಲೆ ಊಟದ ಸವಿನೆನಪುಗಳು ಮತ್ತೊಮ್ಮೆ ಮರುಕಳಿಸಿದವು. ವಿದೇಶದಲ್ಲಿ ನೆಲೆಸಿದ್ದರೂ ನಮ್ಮ ನಾಡಿನ ಸಂಸ್ಕೃತಿ ಮತ್ತು ಆಹಾರ ಪರಂಪರೆಯನ್ನು ನೆನಪಿಸುವಂತಹ ಈ ಬಾಳೆಲೆ ಊಟ ಎಲ್ಲರ ಮನಸೂರೆಗೊಂಡಿತು.

ಬೃಂದಾವನ ಸಂಕಲ್ಪ ತಂಡದ ಫುಡ್ ಕಮಿಟಿಯ ಎಲ್ಲಾ ಸ್ವಯಂಸೇವಕರು ಈ ಊಟದ ಯಶಸ್ಸಿಗಾಗಿ ಅತ್ಯಂತ ಶ್ರಮವಹಿಸಿ, ಉತ್ತಮ ಗುಣಮಟ್ಟದ ಹಾಗೂ ರುಚಿಕರವಾದ ಊಟವನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾದರು. ಇದುವರೆಗೆ ನಡೆದ ಬೃಂದಾವನ ಕನ್ನಡ ಕೂಟದ ಎಲ್ಲಾ ಬಾಳೆಲೆ ಊಟಗಳಿಗಿಂತಲೂ ಈ ಬಾರಿಯ ಬಾಳೆಲೆ ಊಟ ಅತ್ಯಂತ ಅದ್ಭುತವಾಗಿತ್ತು ಎಂಬ ಪ್ರಶಂಸೆಯ ಮಾತುಗಳು ಕೇಳಿಬಂದವು. ಭಾಗವಹಿಸಿದ್ದ ಜನರಿಂದ ಚಪ್ಪಾಳೆಯ ಮೂಲಕವೂ ಫುಡ್ ಕಮಿಟಿಯ ಸ್ವಯಂಸೇವಕರಿಗೆ ಮೆಚ್ಚುಗೆ ವ್ಯಕ್ತವಾಯಿತು. ಅವರ ಪರಿಶ್ರಮ ಮತ್ತು ಸೇವೆಗೆ ಎಲ್ಲರಿಂದಲೂ ಹೃತ್ಪೂರ್ವಕ ಅಭಿನಂದನೆಗಳು ಸಲ್ಲಿಸಲಾಯಿತು.

ಆನಂತರ ಭೋಜನ ಕಾರ್ಯಕ್ರಮ ಮುಗಿದ ಬಳಿಕ ಸಭಾ ಕಾರ್ಯಕ್ರಮವು ಪ್ರಾರಂಭವಾಯಿತು. ಇತ್ತೀಚೆಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಭಾಜನರಾದ, ನಮ್ಮೆಲ್ಲರ ನೆಚ್ಚಿನ ನಟ ಹಾಗೂ ಪದ್ಮಭೂಷಣ ಡಾ. ಅನಂತ್ ನಾಗ್ ಅವರ ಗೌರವಾರ್ಥವಾಗಿ ಈ ವರ್ಷದ ಗಣೇಶೋತ್ಸವದ ವೇದಿಕೆಯನ್ನು "ಡಾ. ಅನಂತ್ ನಾಗ್ ವೇದಿಕೆ" ಎಂದು ನಾಮಕರಣ ಮಾಡಲಾಗಿತ್ತು.

ಅದಾದ ಬಳಿಕ, ಜಿಯಾ ಹುಲಿಕೇರಿ ಅವರ ಪ್ರಾರ್ಥನೆಯೊಂದಿಗೆ ಗಣೇಶೋತ್ಸವದ ವೇದಿಕೆ ಕಾರ್ಯಕ್ರಮಕ್ಕೆ ವಿಧಿವತ್ತಾಗಿ ಚಾಲನೆ ನೀಡಲಾಯಿತು. ಅವರ ಸುಮಧುರ ಪ್ರಾರ್ಥನೆಯು ಕಾರ್ಯಕ್ರಮಕ್ಕೆ ಭಕ್ತಿಭಾವದ ಮೆರುಗನ್ನು ನೀಡಿತು.

ಅನಂತರ, ಭಾರತದ ರಾಷ್ಟ್ರಗೀತೆ "ಜನ ಗಣ ಮನ" ಹಾಗೂ ಅಮೆರಿಕದ ರಾಷ್ಟ್ರೀಯ ಗೀತೆ ಅನ್ನು ಹಾಡಲಾಯಿತು. ಈ ಸಂದರ್ಭದಲ್ಲಿ ಎಲ್ಲರೂ ಎದ್ದು ನಿಂತು ಭಾರತ ಮತ್ತು ಅಮೆರಿಕ—ಎರಡೂ ದೇಶಗಳಿಗೆ ಗೌರವವನ್ನು ಸಲ್ಲಿಸಿದರು.

ತದನಂತರ, ಅನನ್ಯ ಪ್ರಕಾಶ್, ಅಶ್ವಿನಿ ಹಾಗೂ ತಂಡದವರು ಗಣೇಶನ ಕುರಿತಾದ ಭಕ್ತಿಗೀತೆಯೊಂದನ್ನು ಮತ್ತು ಜನಪ್ರಿಯ "ಕಾಂತಾರ" ಚಿತ್ರದ ಗೀತೆಯನ್ನು ಪ್ರಸ್ತುತಪಡಿಸಿದರು. ಅವರ ಸುಮಧುರ ಗಾಯನವು ಅತ್ಯಂತ ಮನಮೋಹಕವಾಗಿ ಮೂಡಿಬಂದು, ಪ್ರೇಕ್ಷಕರಿಂದ ಉತ್ತಮ ಮೆಚ್ಚುಗೆಗೆ ಪಾತ್ರವಾಯಿತು.

ನಂತರದ ಕಾರ್ಯಕ್ರಮಗಳಲ್ಲಿ ಪ್ರಮುಖವಾಗಿ ಗಮನ ಸೆಳೆದದ್ದು ಭಗವದ್ಗೀತೆಯ ಶ್ಲೋಕಗಳ ಪಠಣ ಹಾಗೂ ಅವುಗಳ ಅರ್ಥವನ್ನು ತಿಳಿಸುವ ಕಾರ್ಯಕ್ರಮ. ಡಾ. ಸರಳಾ ಉಪಾಧ್ಯಾಯ ಅವರು ಚಿಕ್ಕ ಮಕ್ಕಳಿಗೆ ಭಗವದ್ಗೀತೆಯ ಜ್ಞಾನವನ್ನು ಪರಿಚಯಿಸುವ ಉದ್ದೇಶದಿಂದ ಅವರಿಗೆ ವಿವಿಧ ಶ್ಲೋಕಗಳನ್ನು ಹಾಗೂ ಅವುಗಳ ಅರ್ಥವನ್ನು ಕಲಿಸಿಕೊಟ್ಟಿದ್ದರು. ಮಕ್ಕಳು ತಾವು ಕಲಿತ ಭಗವದ್ಗೀತೆಯ ಶ್ಲೋಕಗಳನ್ನು ವೇದಿಕೆಯಲ್ಲಿ ಸುಂದರವಾಗಿ ಪಠಿಸಿ, ಅವುಗಳ ಅರ್ಥವನ್ನು ಸಹ ಪ್ರಸ್ತುತಪಡಿಸಿದರು. ಮಕ್ಕಳ ಈ ಅದ್ಭುತ ಪ್ರದರ್ಶನವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ತದನಂತರ, ನಮ್ಮ ಬೃಂದಾವನ ಕನ್ನಡ ಕೂಟದ ಸಹೋದರ ಕನ್ನಡ ಕೂಟವಾದ ತ್ರಿವೇಣಿ ಕನ್ನಡ ಕೂಟದ ಸದಸ್ಯರು ಆಗಮಿಸಿ, ನೃತ್ಯ ಮತ್ತು ಸಂಗೀತದ ಮೂಲಕ ಎಲ್ಲರನ್ನೂ ಮನರಂಜಿಸಿದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅತ್ಯಂತ ಸುಂದರವಾಗಿ ಪ್ರಸ್ತುತಪಡಿಸಿದ ಅವರು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿದರು.

ಇದೇ ಸಂದರ್ಭದಲ್ಲಿ, ನವೆಂಬರ್ ತಿಂಗಳಲ್ಲಿ ತ್ರಿವೇಣಿ ಕನ್ನಡ ಕೂಟವು ತನ್ನ 50ನೇ ವರ್ಷದ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿರುವ ಸಂತಸದ ಸುದ್ದಿಯನ್ನು ಸಹ ನಮ್ಮೆಲ್ಲರೊಂದಿಗೆ ಹಂಚಿಕೊಂಡರು. ಅವರ ಈ ಮೈಲಿಗಲ್ಲಿನ ಸಂಭ್ರಮಕ್ಕೆ ಶುಭಾಶಯಗಳನ್ನು ಸಲ್ಲಿಸುವುದರೊಂದಿಗೆ, ಎರಡು ಕನ್ನಡ ಕೂಟಗಳ ನಡುವಿನ ಆತ್ಮೀಯ ಬಾಂಧವ್ಯ ಮತ್ತಷ್ಟು ಗಟ್ಟಿಯಾದ ಕ್ಷಣವಾಯಿತು.

ಒಟ್ಟಾರೆಯಾಗಿ, ಈ ಕಾರ್ಯಕ್ರಮವು ಭಕ್ತಿ, ಸಂಸ್ಕೃತಿ, ಸಂಗೀತ ಮತ್ತು ಕನ್ನಡತನದ ಸೊಗಡನ್ನು ಒಂದೆಡೆ ಸೇರಿಸಿದ ಅವಿಸ್ಮರಣೀಯ ಕ್ಷಣವಾಗಿ ಮೂಡಿಬಂತು.

ಅದ್ಭುತವಾಗಿ ಮೂಡಿಬಂದ ಮತ್ತೊಂದು ಕಾರ್ಯಕ್ರಮವೆಂದರೆ ಶ್ರೀ ಯೋಗೇಶ್ ಕುಮಾರ್ ಮತ್ತು ಸ್ನೇಹಾ ನಾರಾಯಣ ಅವರ ಭರತನಾಟ್ಯ ಪ್ರದರ್ಶನ. ಮನಮೋಹಕ ಭಾವಾಭಿನಯ, ಅದ್ಭುತ ಹೆಜ್ಜೆಗಳು ಹಾಗೂ ಭಾರತೀಯ ಶಾಸ್ತ್ರೀಯ ನೃತ್ಯದ ಸೊಬಗಿನ ಮೂಲಕ ಅವರು ರಾಮಾಯಣದ ಕಥೆಯನ್ನು ಪ್ರೇಕ್ಷಕರ ಕಣ್ಣ ಮುಂದೆ ಜೀವಂತವಾಗಿ ಅನಾವರಣಗೊಳಿಸಿದರು.

ಸಂಪೂರ್ಣ ರಾಮಾಯಣವನ್ನು ಭರತನಾಟ್ಯದ ಮೂಲಕ ಸುಂದರವಾಗಿ ನಿರೂಪಿಸಿದ ಈ ಪ್ರದರ್ಶನವು ಎಲ್ಲರ ಗಮನ ಸೆಳೆಯಿತು. ನೃತ್ಯ, ಭಾವಾಭಿನಯ ಮತ್ತು ಕಥಾನಿರೂಪಣೆಯ ಅದ್ಭುತ ಸಮ್ಮಿಲನದೊಂದಿಗೆ ಮೂಡಿಬಂದ ಈ ಕಾರ್ಯಕ್ರಮವು ಗಣೇಶೋತ್ಸವದ ಮತ್ತೊಂದು ಅವಿಸ್ಮರಣೀಯ ಕ್ಷಣವಾಗಿ ಪರಿಣಮಿಸಿತು. ಪ್ರೇಕ್ಷಕರು ಅವರ ಮನೋಜ್ಞ ಪ್ರದರ್ಶನವನ್ನು ಮೆಚ್ಚಿ, ಚಪ್ಪಾಳೆಯ ಮೂಲಕ ಅಭಿನಂದಿಸಿದರು.

ನಂತರ ಮೂಡಿಬಂದ ಮತ್ತೊಂದು ಮನರಂಜನೀಯ ಕಾರ್ಯಕ್ರಮವೆಂದರೆ ಗೀತಾ ಮತ್ತು ತಂಡದವರ ನೃತ್ಯ ಪ್ರದರ್ಶನ. ಜನಪ್ರಿಯ ಚಲನಚಿತ್ರ ಗೀತೆಗಳಿಗೆ ಮನಮೋಹಕವಾಗಿ ನೃತ್ಯ ಪ್ರದರ್ಶಿಸಿದ ತಂಡದ ಸದಸ್ಯರು ತಮ್ಮ ಅದ್ಭುತ ಶಕ್ತಿ, ಉತ್ಸಾಹ ಮತ್ತು ಚೈತನ್ಯದಿಂದ ವೇದಿಕೆಯನ್ನು ರಂಗೇರಿಸಿದರು.

ಅವರ ಉತ್ಸಾಹಭರಿತ ನೃತ್ಯ ಪ್ರದರ್ಶನವು ಪ್ರೇಕ್ಷಕರನ್ನು ಸಂಪೂರ್ಣವಾಗಿ ಮನರಂಜಿಸುವಲ್ಲಿ ಯಶಸ್ವಿಯಾಯಿತು. ತಂಡದ ಅದ್ಭುತ ಎನರ್ಜಿ ಹಾಗೂ ಮನೋಜ್ಞ ನೃತ್ಯಕ್ಕೆ ಪ್ರೇಕ್ಷಕರು ಭರ್ಜರಿ ಚಪ್ಪಾಳೆಗಳ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು. ಗೀತಾ ಮತ್ತು ತಂಡದ ಈ ಉತ್ಸಾಹಭರಿತ ಪ್ರದರ್ಶನವು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿತು.

ಬೃಂದಾವನ ಕನ್ನಡ ಕೂಟವು ಪ್ರತಿವರ್ಷವೂ ಸಮಾಜಮುಖಿ ಕಾರ್ಯಗಳಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬರುತ್ತಿದೆ. ಇದೇ ಪರಂಪರೆಯನ್ನು ಮುಂದುವರಿಸಿಕೊಂಡು, ಈ ವರ್ಷ "ಮಾನ್ವಿ "ಅವರ ಸಂಸ್ಥೆಗೆ ಚಾರಿಟಿ ನೆರವನ್ನು ನೀಡಲಾಯಿತು.

ಚಾರಿಟಿ ತಂಡದ ಸದಸ್ಯರು ವೇದಿಕೆಗೆ ಆಗಮಿಸಿ, ಬೃಂದಾವನ ಕನ್ನಡ ಕೂಟದ ವತಿಯಿಂದ ಸಂಗ್ರಹಿಸಲಾದ ದೇಣಿಗೆಯ ಮೊತ್ತವನ್ನು ಸಂಸ್ಥೆಯ ಪ್ರತಿನಿಧಿಗಳಿಗೆ ಹಸ್ತಾಂತರಿಸಿದರು. ಸಮಾಜದ ಒಳಿತಿಗಾಗಿ ಬೃಂದಾವನ ಕನ್ನಡ ಕೂಟವು ಕೈಗೊಂಡ ಈ ಕಾರ್ಯವು ಕಾರ್ಯಕ್ರಮದ ಮತ್ತೊಂದು ಅರ್ಥಪೂರ್ಣ ಹಾಗೂ ಶ್ಲಾಘನೀಯ ಕ್ಷಣವಾಗಿತ್ತು.

ನಂತರ ಕಿರಣ್ ಅಗ್ರಹಾರ್ ಅವರು ಒಂದು ಸಂತೋಷದ ವಿಷಯವನ್ನು ನಮ್ಮೊಂದಿಗೆ ಹಂಚಿಕೊಂಡರು. ಅವರು ಈ ಬಾರಿ Township Council Election ಗೆ ನಿಂತಿರುವುದಾಗಿ ತಿಳಿಸಿದರು. November 3ರಂದು Election ನಡೆಯಲಿದ್ದು, Robbinsville ನಿಂದ ಬಂದಿದ್ದ ಪ್ರೇಕ್ಷಕರನ್ನು ಒಳಗೊಂಡಂತೆ ಎಲ್ಲರಲ್ಲೂ ತಮ್ಮನ್ನು ಬೆಂಬಲಿಸಿ, ತಮಗೆ Vote ಮಾಡುವಂತೆ ಮನವಿ ಮಾಡಿದರು.

avaru Electionಗೆ ಸ್ಪರ್ಧಿಸುವುದೇ ಒಂದು ಹೆಮ್ಮೆಯ ವಿಷಯವಾಗಿದ್ದು, ಸಮುದಾಯದ ಸೇವೆಗಾಗಿ ಮುಂದೆ ಬಂದಿರುವ ಅವರ ಈ ಪ್ರಯತ್ನಕ್ಕೆ ಎಲ್ಲರೂ ಸಂತೋಷದಿಂದ ಬೆಂಬಲ ವ್ಯಕ್ತಪಡಿಸಿದರು. ಅವರ ಈ ಹೊಸ ಪ್ರಯತ್ನಕ್ಕೆ ಎಲ್ಲರೂ ಶುಭ ಹಾರೈಸಿದರು.

ತದನಂತರ ಕಾರ್ಯಕ್ರಮದಲ್ಲಿ ಆಗಮಿಸಿದ್ದ ಗಣ್ಯ ಅತಿಥಿಗಳ ಸನ್ಮಾನ ಕಾರ್ಯಕ್ರಮ ನಡೆಯಿತು. ಮೊದಲಿಗೆ ಶ್ರೀ ಶಂಕರ್ ಶೆಟ್ಟಿ ಅವರ ಸಾಧನೆಗಳನ್ನು ಸಭಿಕರಿಗೆ ಪರಿಚಯಿಸಿ, ಅವರ ಅಮೂಲ್ಯ ಕೊಡುಗೆ ಹಾಗೂ ಸಾಧನೆಗಳನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಅವರಿಗೆ ಹೂಗುಚ್ಛವನ್ನು ನೀಡಿ, ಅವರ ಸಾಧನೆಗೆ ಮೆಚ್ಚುಗೆ ಹಾಗೂ ಗೌರವವನ್ನು ವ್ಯಕ್ತಪಡಿಸಲಾಯಿತು.

ಅದೇ ರೀತಿ, ನಮ್ಮ ಮತ್ತೊಬ್ಬ ಗೌರವಾನ್ವಿತ ಅತಿಥಿಯಾದ ಶ್ರೀ ಮಧುರಂಗಯ್ಯ ಅವರನ್ನು ಸಹ ವೇದಿಕೆಗೆ ಆಹ್ವಾನಿಸಿ, ಅವರು ಅಕ್ಕದಲ್ಲಿ ಸಲ್ಲಿಸಿರುವ ಗಮನಾರ್ಹ ಸೇವೆ ಹಾಗೂ ಸಾಧನೆಗಳನ್ನು ಸಭಿಕರಿಗೆ ಪರಿಚಯಿಸಲಾಯಿತು. ಅವರಿಗೂ ಹೂಗುಚ್ಛವನ್ನು ನೀಡಿ, ಅವರ ಸಾಧನೆಗಳನ್ನು ಗೌರವಿಸಲಾಯಿತು.

ಅದೇ ಸಂದರ್ಭದಲ್ಲಿ, ಶ್ರೀ ಚಂದ್ರು ಆರಾಧ್ಯ ಅವರನ್ನೂ ಸನ್ಮಾನಿಸಲಾಯಿತು. ಅವರು ಅಕ್ಕದಲ್ಲಿ ತೋರಿಸಿರುವ ಗಮನಾರ್ಹ ಸಾಧನೆ ಹಾಗೂ ಕೊಡುಗೆಗಳನ್ನು ಗುರುತಿಸಿ, ವೇದಿಕೆಯಲ್ಲಿ ಅವರಿಗೆ ಗೌರವ ಸಲ್ಲಿಸಲಾಯಿತು. ಅವರಿಗೂ ಹೂಗುಚ್ಛವನ್ನು ನೀಡಿ, ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

ಮೂವರು ಗಣ್ಯ ಅತಿಥಿಗಳ ಸಾಧನೆಗಳನ್ನು ಸ್ಮರಿಸಿ ಗೌರವ ಸಲ್ಲಿಸಿದ ಈ ಸನ್ಮಾನ ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಗೌರವಪೂರ್ಣವಾಗಿ ಮೂಡಿಬಂದಿತು.

ನಂತರ ಮೂಡಿಬಂದ ಮತ್ತೊಂದು ಅದ್ಭುತ ಕಾರ್ಯಕ್ರಮವೆಂದರೆ ಡಾ. ಸಂಗೀತ ಕಟ್ಟಿ ಕುಲಕರ್ಣಿ ಅವರ ಹಿಂದೂಸ್ತಾನಿ ಗಾಯನ. ಅವರ ಸುಮಧುರ ಹಾಗೂ ಮನಮೋಹಕ ಗಾಯನವು ಪ್ರೇಕ್ಷಕರನ್ನು ಸಂಗೀತ ಲೋಕದಲ್ಲಿ ತೇಲಿಸಿತು. ಡಾ. ಸಂಗೀತ ಕಟ್ಟಿ ಕುಲಕರ್ಣಿ ತಂಡವನ್ನು ಪ್ರಸನ್ನ ಕುಮಾರ್ ಮತ್ತು ಪೂರ್ಣಿಮಾ ಅವರು ಅತ್ಯಂತ ಸುಂದರವಾಗಿ ಹಾಗೂ ಆತ್ಮೀಯವಾಗಿ ಮಾಡಿಕೊಂಡರು

ಈ ಕಾರ್ಯಕ್ರಮಕ್ಕೆ ಶ್ರೀ ರಾಜೇಶ್ ಪೈ ಅವರು ತಬಲಾದಲ್ಲಿ ಅತ್ಯಂತ ಮನೋಜ್ಞವಾಗಿ ಸಾಥ್ ನೀಡಿದರು. ಹಾಗೆಯೇ ಶ್ರೀ ಪ್ರಣವ್ ಸರೂಪ್ ಅವರು ವಯಲಿನ್ ಹಾಗೂ ಕೀಬೋರ್ಡ್‌ನಲ್ಲಿ ಅದ್ಭುತವಾಗಿ ಸಹಕರಿಸಿದರು. ಇವರ ಸಂಗೀತ ಸಾಥ್ ಗಾಯನ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿತು.

ಡಾ. ಸಂಗೀತ ಕಟ್ಟಿ ಕುಲಕರ್ಣಿ ಅವರ ಸುಂದರ ಗಾಯನಕ್ಕೆ ಪ್ರೇಕ್ಷಕರಿಂದ ಭರ್ಜರಿ ಮೆಚ್ಚುಗೆ ವ್ಯಕ್ತವಾಯಿತು.

ಇಡೀ ಕಾರ್ಯಕ್ರಮದುದ್ದಕ್ಕೂ ಸ್ನೇಹಾ ಹುಲಿಕೇರೆ ಮತ್ತು ಪೂರ್ಣಿಮಾ ರಮೇಶ್ ಭಟ್ ಅವರು ತಮ್ಮ ಸುಂದರ ಹಾಗೂ ಮನೋಜ್ಞ ನಿರೂಪಣೆಯ ಮೂಲಕ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮುನ್ನಡೆಸಿದರು. ಅವರ ಚುರುಕಾದ ಹಾಗೂ ಆತ್ಮೀಯ ನಿರೂಪಣೆಯು ಸಭೆಗೆ ಮತ್ತಷ್ಟು ಮೆರುಗು ನೀಡಿತು.

ಈ ಎಲ್ಲಾ ಕಾರ್ಯಕ್ರಮಗಳನ್ನು ಸವಿತಾ ಆನಂದ್ ಅವರು ಅತ್ಯಂತ ಅಚ್ಚುಕಟ್ಟಾಗಿ ಹಾಗೂ ಅಚ್ಚಳಿಯದ ರೀತಿಯಲ್ಲಿ ಸಂಘಟಿಸಿ, ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು. ಅವರ ಪರಿಶ್ರಮ, ಸಮರ್ಪಣೆ ಹಾಗೂ ಸಂಘಟನಾ ಕೌಶಲ್ಯವು ಇಡೀ ಕಾರ್ಯಕ್ರಮದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿತು.

ಅದೇ ರೀತಿ, ಸಂಕಲ್ಪ ತಂಡದ ಅಧ್ಯಕ್ಷರಾದ ಶ್ರೀ ಸುನೀಲ್ ಹುಲಿಕೇರಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಹೃತ್ಪೂರ್ವಕವಾಗಿ ಕೃತಜ್ಞತೆ ಹಾಗೂ ಧನ್ಯವಾದಗಳನ್ನು ಅರ್ಪಿಸಿದರು. ಗಣೇಶೋತ್ಸವದ ಯಶಸ್ಸಿಗೆ ಶ್ರಮಿಸಿದ ಎಲ್ಲಾ ಸ್ವಯಂಸೇವಕರು, ಕಲಾವಿದರು, ಅತಿಥಿಗಳು ಹಾಗೂ ಸಭಿಕರನ್ನು ಸ್ಮರಿಸಿ, ಅವರ ಸಹಕಾರಕ್ಕೆ ಧನ್ಯವಾದಗಳನ್ನು ತಿಳಿಸಿದರು.

ಕಾರ್ಯಕ್ರಮದ ಅಂತ್ಯದಲ್ಲಿ, ಸಂಜೆ ಮನೆಗೆ ತೆರಳುವ ಸಂದರ್ಭದಲ್ಲಿ ಎಲ್ಲರಿಗೂ ಊಟದ ಪ್ಯಾಕೆಟ್‌ಗಳ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಈ ಎಲ್ಲಾ ಆತ್ಮೀಯ ವ್ಯವಸ್ಥೆಗಳನ್ನು ಸಂತೋಷದಿಂದ ಸ್ವೀಕರಿಸಿದ ಸಭಿಕರು, ಗಣೇಶನ ಆಶೀರ್ವಾದವನ್ನು ಪಡೆದು, ಸಂಭ್ರಮ ಹಾಗೂ ಸಂತೃಪ್ತಿಯಿಂದ ಗಣೇಶೋತ್ಸವವನ್ನು ಆಚರಿಸಿ ತಮ್ಮ ಮನೆಗಳತ್ತ ತೆರಳಿದರು.

ಒಟ್ಟಾರೆಯಾಗಿ, ಭಕ್ತಿ, ಸಂಸ್ಕೃತಿ, ಸಂಗೀತ, ನೃತ್ಯ, ಸೇವೆ ಮತ್ತು ಕನ್ನಡತನದ ಸೊಗಡಿನಿಂದ ಕೂಡಿದ್ದ ಈ ಗಣೇಶೋತ್ಸವವು ಎಲ್ಲರ ಮನದಲ್ಲಿ ಅಚ್ಚಳಿಯದ ನೆನಪಾಗಿ ಉಳಿಯಿತು.





ಗಣೇಶೋತ್ಸವ











ಗಣೇಶೋತ್ಸವ















ಸಂತೋಷ್ ಮೈಸೂರ್

ಹರಿ: ಓಂ

||ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ
ಭಜತಾಂ ಕಲ್ಪ ವೃಕ್ಷಾಯ ನಮತಾಂ ಕಾಮಧೇನುವೆ ||

ಶ್ರೀ ರಾಘವೇಂದ್ರಸ್ವಾಮಿಗಳ ೩೫೫ನೇ ಆರಾಧನಾ ಮಹೋತ್ಸವವನ್ನು ನಮ್ಮ ಎಡಿಸನ್ ನಲ್ಲಿ ಇರುವ ಶ್ರೀ ಕೃಷ್ಣವೃಂದಾವನದಲ್ಲಿ ಆಗಸ್ಟ್ ೨೯ ರಂದು ವಿಜೃಂಭಣೆಯಿಂದ ಆಚರಿಸಲಾಯಿತು. ಬೆಳಗ್ಗೆ ಎಂಟು ಗಂಟೆಗೆ ಪೂಜಾ ವಿಧಾನಗಳು ಆರಂಭವಾದವು, ನಮ್ಮೆಲ್ಲರ ನೆಚ್ಚಿನ ಡಾ. ಯೋಗೀಂದ್ರ ಭಟ್ ಆಚಾರ್ಯರು ವಿಭಿನ್ನ ರೀತಿಯಲ್ಲಿ ನೆಡೆಸಿದರು. ಬೆಳಗಿನ ಪೂಜಾ ವಿಧಾನವನ್ನು ಅಭಿಷೇಕ, ಮಹಾ ಪೂಜೆ, ರಾಯರ ಅಷ್ಟೋತ್ತರ ಪಾರಾಯಣ, ಮಹಾ ಮಂಗಳಾರತಿ ಎಲ್ಲವೂ ಬಹಳ ಚೆನ್ನಾಗಿ ಆಯಿತು. ಮಧ್ಯಾನದ ಊಟವಂತು ಬಹಳ ರುಚಿಯಾಗಿತ್ತು, ಉಡುಪಿ ಚೌಕಿ ಮಾದರಿಯಲ್ಲಿ ಜನರು ಪ್ರಸಾದ ಸ್ವೀಕರಿಸಿದರು. ಅತ್ತಕಡೆ ಪ್ರಸಾದ ಬಡಿಸುತ್ತಿದ್ದರು ಮತ್ತು ಇನ್ನೊಂದು ಕಡೆ ಪ್ರವಚನ, ಸಂಗೀತ, ಇತ್ಯಾದಿಗಳು ನೆಡೆಯುತ್ತಿತ್ತು. ಒಮ್ಮೆ ನಾವು ಉಡುಪಿಯಲ್ಲಿ ಇದ್ದೇವೋ ಎಂದು ಅನ್ನಿಸಿತು. ಅಮೆರಿಕಾದ ಉಡುಪಿ ಕ್ಷೇತ್ರ ಎಡಿಸನ್ ಎನ್ನುವ ನಮ್ಮ ಅನಿಸಿಕೆಯನ್ನು ಈ ತರಹದ ವಿಷಯಗಳು ಮತ್ತಷ್ಟು ಸ್ಪಷ್ಟ ಪಡಿಸುತ್ತದೇ .

ಹಾಗೆ ಸಂಜೆ ಭಜನೆ, ಅಷ್ಟಾವದಾನ ಸೇವೆ, ರಥೋಸ್ತವ, ಪಲ್ಲಕಿ ಉತ್ಸವಗಳು ನೆಡೆಯಿತು. ಡಾ. ಯೋಗೀಂದ್ರ ಭಟ್ ಆಚಾರ್ಯರು ತಮ್ಮ ಪ್ರವಚನದಲ್ಲಿ ಗುರುರಾಯರ ಮೌಲ್ಯಗಳನ್ನು ಎತ್ತಿ ಹಿಡಿದು ನಮಗೆ ಪರಿಚಾಯಿಸಿದರು. ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀ ಪಾದರಿಗೆ ಈ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದಕ್ಕೆ ನಮ್ಮ ಸಾಷ್ಟಾಂಗ ಪ್ರಣಾಮಗಳು .

ಹರಿ: ಓಂ

||ವಸುದೇವಸುತಂ ದೇವಂ ಕಂಸ ಚಾನೂರ ಮರ್ದನಂ
ದೇವಕೀ ಪರಮಾಣದಾಂ ಕೃಷ್ಣಂ ಒಂದೇ ಜಗದ್ ಗುರುಂ||

ಶ್ರೀ ಕೃಷ್ಣ ಜಯಂತಿಯನ್ನು ಸೆಪ್ಟೆಂಬರ ೪ ಮತ್ತು ೫ ನೇ ತಾರೀಖು ವಿಶೇಷವಾಗಿ ನಮ್ಮ ನ್ಯೂ ಜರ್ಸಿ, ಎಡಿಸನ್ ನಗರದ ಶ್ರೀ ಕೃಷ್ಣ ವೃಂದಾವನದಲ್ಲಿ ಆಚರಿಸಲಾಯಿತು.

ಮೊದಲನೆಯ ದಿನ ಅಷ್ಟಮಿಯಂದು ಮುಂಜಾನೆ ಪ್ರಾತಃ ಪೂಜೆ, ವೇದ ಪಾರಾಯಣ, ಸಂಪೂರ್ಣ ಭಗವದ್ ಗೀತಾ ಪಾರಾಯಣ, ಸಂಜೆ ಹೊತ್ತಿಗೆ ಭಜನೆ, ಸಂಗೀತ ಸೇವೇ, ಪಂಚಾಮೃತ ಅಭಿಷೇಕ ಮತ್ತು ಮಹಾ ಪೂಜೆ ನೆಡೆಯಿತು. ರಾತ್ರಿ ೧೧.೪೩ ಕ್ಕೆ ಶ್ರೀ ಕೃಷನಿಗೆ ನೆರೆದಿದ್ದ ಎಲ್ಲಾ ಜನರು ಅರ್ಘ್ಯವನ್ನು ಕೊಟ್ಟು , ಕೃಷ್ಣನನ್ನು ಸ್ವಾಗತಿಸಿದರು. ಶ್ರೀ ಕೃಷನಿಗೆ ಅರ್ಘ್ಯ ಕೊಡುವುದು ಬಹಳ ವಿಶೇಷ, ನಮ್ಮ ಕೃಷ್ಣ ವೃಂದಾವನದ ಆಚಾರ್ಯರುಗಳಿಗೆ ನಾವೆಲ್ಲರೂ ನಮನ ಸಲ್ಲಿಸೋಣ.

ಎರಡನೆಯ ದಿನ ಲೀಲೋತ್ಸವದ ದಿನ, ಶ್ರೀ ಕೃಷ್ಣ ವೃಂದಾವನದಲ್ಲಿ ಪುಟ್ಟ ಪುಟ್ಟ ಕೃಷ್ಣ ರಾಧೆಯರು ಕಂಗೊಳಿಸಿದರು. ಎಲ್ಲರೂ ಕೃಷ್ಣ ರಾಧೆಯರ ವೇಷ ಧರಿಸಿ ಎರಡು ಮಾತುಗಳನ್ನು ಆಡಿದರೂ, ಕೆಲವರು ಹಾಡು ಹಾಡಿದರು, ನೋಡೋಕೆ ಎರಡು ಕಣ್ಣು ಸಾಲದಾಗಿತ್ತು. ಹಾಗೆ ಮಕ್ಕಳು ಚಿತ್ರ ಬರೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡರು. ನಮ್ಮ ಪುಟ್ಟ ಕೃಷ್ಣನನ್ನು ವಿವಿಧ ರೂಪದಲ್ಲಿ ಕಂಡೆವು. ಹಾಗೆ ಮಡಿಕೆ ಒಡೆಯುವ ಸ್ಪರ್ಧೆ ಕೂಡಾ ನೆಡೆಯಿತು. ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ನಮ್ಮ ಚಿನ್ನಾರಗಳಿಗೆ ನೆಡೆಸಿಕೊಟ್ಟ ಶ್ರೀ ಕೃಷ್ಣ ವೃಂದಾವನಕ್ಕೆ ಅಭಿನಂದನೆಗಳು.

ಸಾಯಂಕಾಲ, ಪೂಜೆ ರಥೋತ್ಸವ ಪಲ್ಲಕಿ ಉತ್ಸವಗಳು, ವಿಜೃಂಭಣೆಯಿಂದ ನೆಡೆಯಿತು. ಎಲ್ಲರೂ ಪಟಾಕಿಗಳನ್ನು ಸಿಡಿಸಿ, ಕೃಷ್ಣನ ಹುಟ್ಟು ಹಬ್ಬವನು ಆಚರಿಸಿದೇವು. ವಿಶೇಷವಾಗಿ, ಶ್ರೀ ವಿದ್ಯಾಭೂಷಣರು ಸಾಯಂಕಾಲದ ಕಾರ್ಯಕ್ರಮಗಳನ್ನು ವೀಕ್ಷಿಸಿದರು. ಇದಕ್ಕಿಂತ ಭಾಗ್ಯ ಇನ್ನೊಂದಿಲ್ಲ. ದೂರದ ಅಮೆರಿಕೆಯಲ್ಲಿ ಶ್ರೀ ಕೃಷ್ಣ ವೃಂದವನವನ್ನು ಸ್ಥಾಪಿಸಿ ಇಷ್ಟೆಲ್ಲ ವಿನೂತನ ಕಾರ್ಯಕ್ರಮಗಲ್ಲನ್ನು ನೆಡಿಸಿಡ ಶ್ರೀ ಕೃಷ್ಣ ವೃಂದಾವನಕ್ಕೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರಿಗೆ ಹಾಗೂ ಮಠದ ಎಲ್ಲ ಆಚಾರ್ಯರಿಗೆ ನಮ್ಮ ಕೋಟಿ ನಮನ.

ಶ್ರೀ ಕೃಷ್ಣಾರ್ಪಣಮಸ್ತು









ಅಕ್ಕ ಸಮ್ಮೇಳನ



ಶಶಿಧರ

ಅಕ್ಕ ಬೆಳ್ಳಿಹಬ್ಬದ ವಿಶ್ವ ಕನ್ನಡ ಸಮ್ಮೇಳನ 2026 ಸೆಪ್ಟೆಂಬರ್ 4 ರಿಂದ 6ರವರೆಗೆ ಫಿಲಡೆಲ್ಫಿಯಾದ ಪೆನ್ಸಿಲ್ವೇನಿಯಾ ಕನ್ವೆನ್ಷನ್ ಸೆಂಟರ್‌ನಲ್ಲಿ ಅದ್ಧೂರಿಯಾಗಿ ನೆರವೇರಿತು. ಇದು 25ನೇ ವಾರ್ಷಿಕೋತ್ಸವದ ವಿಶೇಷ ಆವೃತ್ತಿಯಾಗಿದ್ದರಿಂದ, ಈವರೆಗಿನ ಅತಿ ದೊಡ್ಡ ಸಮ್ಮೇಳನವಾಗಿತ್ತು.

ಈ ಬಾರಿಯ ಅಕ್ಕ ಸಮ್ಮೇಳನಕೆ ಮೂರ್ನಾಲ್ಕು ಸಾವಿರ ಕನ್ನಡಿಗರ ಹಾಜರಿಇತ್ತು. ಆಯೋಜಕರಿಂದ ಅತ್ಯಂತ ನಾಜೂಕಾದ ಯಾವುದಕ್ಕೂ ಕೊರತೆ ಇಲ್ಲದ ವ್ಯವಸ್ಥೆ ಸಿದ್ಧವಾಗಿತು. ಕನ್ವೆನ್ಷನ್ ಸೆಂಟರ್‌ನಲ್ಲೆ ಸಾಂಸ್ಕೃತಿಕ ಹಾಗು ಮನರಂಜನ ಕಾರ್ಯಕ್ರಮಕ್ಕೆ ವಿವಿಧ ಗಾತ್ರದ ವೇದಿಕೆ ನಿರ್ಮಾಣವಾಗಿತ್ತು.

ಡಾ|| ಪುನೀತ್ ರಾಜಕುಮಾರ್ ವೇದಿಕೆ ಮುಖ್ಯ ಸಭಾಂಗಣದ ವೇದಿಕೆಯಾಗಿತ್ತು. ವಿಶೇಷವೆಂದರೆ ಪ್ರತಿಯೊಂದು ವೇದಿಕೆಗೆ ಕನ್ನಡ ಖ್ಯಾತ ಕಲಾವಿದರು ಮತ್ತು ಕವಿಗಳಾದ ಎಸ್. ಎಲ್ ಬೈರಪ್ಪ ,ಎಸ್ ಜಾನಕಿ, ಶಂಕರನಾಗ್ , ವಿಶ್ವೇಶ್ವರಯ್ಯ ಅವರುಗಳ ಹೆಸರಿಡಲಾಗಿತ್ತು. ಪ್ರತಿಯೊಂದು ವೇದಿಕೆಯು ಸಭಾಂಗಣದಿಂದ ಕುಳಿತು ಕಾರ್ಯಕ್ರಮ ನೋಡಲು ಆಸನದ ವ್ಯವಸ್ಥೆ ಬಹಳ ಚೆನ್ನಾಗಿತ್ತು ಜೊತೆಗೆ ಧ್ವನಿವರ್ಧಕ ವ್ಯವಸ್ಥೆ ಅಚ್ಚುಕಟ್ಟಾಗಿತ್ತು.

ಕನ್ವೆನ್ಷನ್ ಸೆಂಟರ್‌ನ ಮತ್ತೊಂದೆಡೆ ಊಟದ ಸಭಾಂಗಣದ ವ್ಯವಸ್ಥೆಯಿತ್ತು. ಪಕ್ಕದಲ್ಲೆ ಕಾರ್ಯಕ್ರಮ ಪ್ರಾಯೋಜಕರ ಹಾಗ ವಿವಿಧ ಉತ್ಪನ್ನಗಳ ಪ್ರದರ್ಶನ ಮಳಿಗೆಗಳಿತ್ತು, ಭಾಗವಹಿಸಿದವರಿಗೆ ಇದರ ಲಾಭ ಪಡೆಯುವ ಅವಕಾಶವಿತ್ತು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಕರ್ನಾಟಕದಿಂದ ಪೂಜ್ಯ ಜಗದ್ಗುರುಗಳು, ಸ್ವಾಮೀಜಿಗಳು, ಗಣ್ಯವ್ಯಕ್ತಿಗಳು, ಸಾಧಕರು, ಕಲಾವಿದರು, ಉದ್ಯಮಿಗಳು, ಚಲನಚಿತ್ರ ನಟರು ಹಾಗು ಅಮೇರಿಕಾದ ಮೂಲೆ ಮೂಲೆ ಇಂದ ಮತ್ತು ಕರ್ನಾಟಕದಿಂದಲು ಕನ್ನಡಾಭಿಮಾನಿಗಳ ಆಗಮನವಿತ್ತು.

ಈ ಅಕ್ಕ ಸಮ್ಮೇಳನಕೆ ಅಕ್ಕ ಛೇರ್ಮನ್ ಡಾಕ್ಟರ್ ಶ್ರೀ ಅಮರ್ ನಾಥ್ ಗೌಡ ಹಾಗು ಅಕ್ಕ ಪ್ರೆಸಿಡೆಂಟ್ ಶ್ರೀ ಮಧು ರಂಗಯ್ಯನವರ ನಾಯಕತ್ವದಲಿ ಜರುಗಿತು.

ಭಾಗವಹಿಸುವ ಪುರುಷರು ಹಾಗು ಮಹಿಳೆಯರಿಗೆ ಮೂರು ದಿನ ಪ್ರತಿ ಹೊತ್ತಿಗೆ ವೇಷಭೂಷಣ ನಿಯಮವ ಆಯೋಜಕರು ಮೊದಲಲೇ ತಿಳಿಸಿಯಾಗಿತ್ತು. ಅದರ ಪ್ರಕಾರ ಮೂರು ದಿನ ವಿಧ ವಿಧವಾದ ಉಡುಗೆ- ತೋಡುಗೆಗಳ ಧರಿಸಿ ಬಂದವರ ನೋಡಲು ತುಂಬಾ ವಿಶೇಷವಾಗಿತ್ತು.

ಶುಕ್ರವಾರ ಸಂಜೆ ಅತಿಥಿಗಳ ನೊಂದಣಿ ನಂತರ ಅಲ್ಲಿಯೇ ಸ್ಥಾಪಿಸಿದ್ದ ಗಣೇಶನ ಪೂಜೆ ಹಾಗು ಮುಖ್ಯ ಸಭಾಂಗಣದ ಡಾಕ್ಟರ್ ಪುನಿತ್ ರಾಜಕುಮಾರ್ ವೇದಿಕೆಯಲಿ ಪ್ರಾರ್ಥನೆ ಇಂದ ಕಾರ್ಯಕ್ರಮಕಕ್ಕೆ ಚಾಲನೆ ಸಿಕ್ಕಿತ್ತು. ಇಲ್ಲಿಯೆ ನಂತರ ಭಕ್ತಿಲಹರಿ ಕಚೇರಿ Dr. ವಿದ್ಯಾಭೂಷಣ ರವರಿಂದ ನಡೆಯಿತು, ಇದು ಬಹಳ ಮಧುರ ವಾಗಿತ್ತು.

ಶನಿವಾರ ಬೆಳಗ್ಗೆ ಅಕ್ಕ 25ನೆ ವರ್ಷದ ಸಮ್ಮೇಳನದ ಮೇರವಣಿಗೆ ಪರಮಪೂಜ್ಯ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು, ಗೌರವಾನ್ವಿತ ಕೇಂದ್ರ ಬೃಹತ್ ಕೈಗಾರಿಕೆಗಳ ಸಚಿವರಾದ ಶ್ರೀ ಎಚ್. ಡಿ. ಕುಮಾರಸ್ವಾಮಿ ಮತ್ತು ಗಣ್ಯರು, ವಿಶೇಷ ಅತಿಥಿಗಳು,ಅಕ್ಕ ಅಧ್ಯಕ್ಷರು ಆಯೋಜಕರು ಇವರೆಲ್ಲರ ಸಾರಥ್ಯದಲ್ಲಿ ಫಿಲಿದೆಲ್ಫಾಯಾ ನಗರದ ಬೀದಿಯಲಿ ನಡೆಯಿತು, ಕನ್ನಡದ ತಾಯಿ ಭುವನೇಶ್ವರಿಯ ಘೋಷಣೆ ಕೂಗುತ ತೇರು ಎಳೆಯುವುದೇ ವಿಶೇಷವಾಗಿತ್ತು ಮತ್ತು ಭಾಗವಹಿಸಿದ ಅಮೇರಿಕಾದ ಎಲ್ಲ ಕನ್ನಡ ಕೂಟಗಳು ಅವರವರ ಸಂಘದ ಫಲಕಗಳ ಹೊತ್ತು ಹೆಜ್ಜೆ ಹಾಕುತ್ತಿದ್ದ ಸದಸ್ಯರ ಉತ್ಸಾಹ ಉತ್ತುಂಗಕೆ ಏರಿತ್ತು. ಮೆರವಣಿಗೆಯಲಿ ಅಲ್ಲಲ್ಲಿ ಸೆಲೆಬ್ರಿಟಿಗಳ ಜೊತೆ ಫೋಟೋ ಹಿಡಿಯುವವರು, ಸೆಲ್ಫಿ ಕ್ಲಿಕಿಸುವರು, ಡೊಳ್ಳು ಹೊಡೆತದ ಶಬ್ದಕೆ ಕುಣಿಯುವವರ ನೋಡುವುದೇ ಚೆಂದವಿತ್ತು.

ನಂತರ ಮುಖ್ಯ ಸಭಾಂಗಣದಲ್ಲಿ ಡಾಕ್ಟರ್ ಪುನಿತ್ ರಾಜಕುಮಾರ್ ವೇದಿಕೆಯ ಮೇಲೆ ಭಾಗವಹಿಸಿದ ಎಲ್ಲಾ ಗಣ್ಯರು ಆಸಿನಗೊಂಡ ನಂತರ ಇವರ ಸಮ್ಮುಖದಲ್ಲಿ ಉದ್ಘಾಟನಾ ಸಮಾರಂಭ ನಡೆಯಿತು. ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಡಿ ಕೆ ಶಿವಕುಮಾರ್ ರವರಿಂದ ಉದ್ಘಾಟನಾ ಭಾಷಣ ನಡೆಯಿತು ಬಳಿಕ ಶ್ರೀ ನಿರ್ಮಲನಂದ ಸ್ವಾಮೀಜಿ, ಭಾರತ ಸರ್ಕಾರದ ಭಾರಿ ಕೈಗಾರಿಕ ಮಂತ್ರಿ ಶ್ರೀ ಹೆಚ್ ಡಿ ಕುಮಾರಸ್ವಾಮಿ ಯವರ ಮತ್ತೆ ಇನ್ನು ಹಲವಾರು ಗಣ್ಯರ ಭಾಷಣದ ಬಳಿಕ ಸಮಾರಂಭದ ಉದ್ಘಾಟನೆಯ ಘೋಷಣೆಯಾಯಿತು ಇದಕ್ಕೆ ಭಾಗವಹಿಸಿದ ಪ್ರತಿಯೊಬ್ಬರು ಸಾಕ್ಷಿಯಾದರು.

ಅಕ್ಕ ಸಮ್ಮೇಳನ

ಸಮ್ಮೇಳನಕ್ಕೆ ಮೊದಲೆ ಪ್ರಕಟಿಸಿದ್ದ ಆಹಾರ ಪಟ್ಟಿಯಂತೆ ಉಟೋಪಚಾರ ನಡೆಯಿತು.
ವೆಜ್ ಹಾಗು ನಾನ್ ವೆಜ್ ಪ್ರಿಯರಿಗೆ ಪ್ರತ್ಯೇಕ ಐಟಂ ಇತ್ತು. ಯಾವುದೆ ಗೊಂದಲ ನೂಕು ನುಗ್ಗಲು ಇಲ್ಲದೆ ಪ್ರತಿಯೊಬ್ಬರಿಗೂ ಸವಿಯಲು ವ್ಯವಸ್ಥೆ ಚೆನ್ನಾಗಿತ್ತು. ಅದರಲ್ಲೂ ಶುಕ್ರವಾರ ಮದ್ಯಾಹ್ನದ ಊಟಕ್ಕೆ ನೀಡಿದ ನಂದಿನಿ ಮೈಸೂರ್ ಪಾಕ್ ಊಟದರುಚಿಯನ್ನು ದ್ವಿಗುಣಗೊಳಿಸಿತ್ತು.
ಮದ್ಯೆಮದ್ಯೆ ಕಾಫಿ ಟೀ ಜೊತೆಗೆ ನೀಡುತ್ತಿದ ತಿಂಡಿ ತಿನಿಸುಗಳು ಕಾರ್ಯಕ್ರಮ ವೀಕ್ಷಣೆಗೆ ಶಕ್ತಿ ತುಂಬುವಂತಿತ್ತು.
ಪ್ರತಿ ದಿನ ಸಂಜೆಯ ಸಂಗೀತ ಕಾರ್ಯಕ್ರಮಗಳು ಪ್ರೇಕ್ಷಕರ ಮೈ ಮರೆಸಿ ಕುಣಿಸಿ ಬಿಡುತಿತ್ತು.
ಮನರಂಜನ ಕಾರ್ಯಕ್ರಮಗಳಿತ್ತು ಬಹಳಷ್ಟು. ಪುರುಸೊತ್ತಿಲ್ಲದೆ ಶುಕ್ರವರ ಸಂಜೆಯಿಂದ ಭಾನುವಾರ ರಾತ್ರಿವರೆಗೆ ಮೂರು ದಿನವು ಕುಳಿತು ನೋಡುವಷ್ಟು.
ಕೆಲ ಕಾರ್ಯಕ್ರಮಗಳ ನೋಡಿದರು ಅಷ್ಟು. ಒಂದರ ಮೇಲೊಂದು ಕಾರ್ಯಕ್ರಮಗಳಿತ್ತಲ ಅದಕೆ ಕೆಲವನು ನೋಡಿದರು ಅಷ್ಟು ಇಷ್ಟು.
ತೆಗೆದುಕೊಳ್ಳಲಾಗಲೆ ಇಲ್ಲ ಕೆಲವರಿಗೆ ರೆಸ್ಟು. ಆದರೂ ನೋಡಿ ಪ್ರತಿ ಕಾರ್ಯಕ್ರಮವಿತ್ತು ಬೆಸ್ಟು.
ಅನಿಸಿತು ಸಮ್ಮೇಳನ ಇದ್ದಿದರೆ ಇನ್ನೊಂದಿನ ಚೆನ್ನಾಗಿತ್ತು ಎಷ್ಟು .
ಹೇಳಬೇಕೆಂದರೆ ಒಂದು ಕವನದಲಿ ಇಡಿ ಸಮ್ಮೇಳನದ ಸಡಗರ
ಫಿಲಿಡೆಲ್ಫಿಯಾ ನಗರದಿ ನಡೆಯಿತು ಬೆಳ್ಳಿ ಹಬ್ಬದ ಸಮ್ಮೇಳನ 2026 ಅಮೇರಿಕಾ ಕನ್ನಡ ಕೂಟಗಳ ಆಗರ (AKKA)
ಸಮ್ಮೇಳನದಿ ಭಾಗವಹಿಸಿದ್ದರು ಅಮೇರಿಕನ್ನಡಿಗರು ಮೂರ್ನಾಲ್ಕು ಸಾವಿರ
ಕರ್ನಾಟಕ ಮುಖ್ಯಮಂತ್ರಿಗಳಾಗಿದ್ದರು ಮುಖ್ಯ ಉದ್ಘಾಟನಾಭಾಷಣಕಾರ
ಊಟ ತಿಂಡಿ ಇತ್ತು ತುಂಬಾ ರುಚಿಕರ
ಪ್ರತಿ ಕಾರ್ಯಕ್ರಮ ಎತ್ತಿ ತೋರಿಸುತಿತ್ತು ನಮ್ಮ ಕನ್ನಡ ನೆಲ ಜಲ ಪರಂಪರೆಯ ಸಂಸ್ಕಾರ
ಬಿಳ್ಕೊಟ್ಟರು 2026 ಅಕ್ಕನ ವಂದಿಸುತ ಆಯಿತು ಆ ಸಮಯದಿ ಎಲ್ಲರ ಹೃದಯಭಾರ
ಆದರೆ 2028ರ ಅಕ್ಕ ಸಮ್ಮೇಳನ ಎಲ್ಲಿ ನಡೆವುದು ಎಂದು ಮಾಡುತಿದ್ದರು ಉದ್ಗಾರ
ಹೇಳಬೇಕು ನಡೆಸಿದವರಿಗೂ ಭಾಗವಹಿಸಿದವರಿಗೂ ಧನ್ಯವಾದಗಳ ಜೊತೆಗೆ ಜಯಕಾರ






ಅಕ್ಕ ಸಮ್ಮೇಳನ















ಯಶಸ್ವಿನಿ ಬಿಳಿಮಗ್ಗ

ಸರಳ ಜೀವನದ ಸಣ್ಣ ಸಂತೋಷಗಳು

ಜೀವನದ ಜಂಜಾಟಗಳಿಂದ ಕೆಲವೊಮ್ಮೆ ನಮ್ಮ ಸುತ್ತಮುತ್ತಲಿರುವ ಸಾಮಾನ್ಯ ಸಂತೋಷದ ಸಂಗತಿಗಳನ್ನು ಗಮನಿಸುವುದನ್ನು ಮರೆಯುತ್ತೇವೆ. ಬೆಳಗಿನ ಸಮಯ ಹೊರಗಿನ ತಂಪಾದ ಗಾಳಿಯನ್ನು ಆಸ್ವಾದಿಸುವುದು, ನಿಧಾನವಾಗಿ ಕಾಫಿಯನ್ನು ಕುಡಿಯುವುದು, ಸೂರ್ಯನ ಬೆಳಕಿಗೆ ಮೈಯೊಡ್ಡುವುದು- ಇವುಗಳೆಲ್ಲವೂ ಸಾಮಾನ್ಯ ಸಂಗತಿಗಳೇ, ಆದರೆ ಇಂತಹ ಕ್ಷಣಗಳನ್ನು ಮನಸ್ಸಿನಿಂದ ಅನುಭವಿಸಿದಾಗ ಮಾತ್ರ ಅದರ ಮೌಲ್ಯ ತಿಳಿಯುತ್ತದೆ.

ನಮ್ಮ ಜೀವನದಲ್ಲಿ ಹೋಲಿಕೆಗಳು ಹೆಚ್ಚಾದಂತೆ ಸಂತೋಷವು ಕಡಿಮೆಯಾಗುತ್ತದೆ. ಅವರ ಮನೆ ದೊಡ್ಡದಿದೆ, ನಮ್ಮ ಕಾರು ಅವರಿಗಿಂತ ಚಿಕ್ಕದು, ಮತ್ತೊಬ್ಬರಿಗೆ ಹೆಚ್ಚು ಸಂಬಳ, ಇನ್ನೊಬ್ಬರು ನಮಗಿಂತ ಹೆಚ್ಚು ಸಾಧಿಸಿದ್ದಾರೆ ಇತ್ಯಾದಿ... ಹೋಲಿಕೆಗೆ ಕೊನೆಯೆಂಬುದು ಇರುವುದಿಲ್ಲ. ಅತಿಯಾದ ಹೋಲಿಕೆಯಿಂದ ನಮಗೆ ದೇವರು ಕರುಣಿಸಿರುವ ವರಗಳನ್ನು ನಾವು ಮರೆತುಬಿಡುತ್ತೇವೆ, ಕೃತಘ್ನರಾಗುತ್ತೇವೆ.

ನಮಗೆ ಸಂತೋಷ ನೀಡಲು ಯಾವಾಗಲೂ ದೊಡ್ಡ ದೊಡ್ಡ ಕಾರಣಗಳೇ ಬೇಕಾಗಿರುವುದಿಲ್ಲ. ಮನೆಯಲ್ಲಿಯೇ ನಮಗಿಷ್ಟವಾದ ಆಹಾರವನ್ನು ತಯಾರಿಸಿ ತಿನ್ನುವುದು, ಶಾಲಾ-ಕಾಲೇಜು ದಿನಗಳ ಸ್ನೇಹಿತರಿಗೆ ಕರೆ ಮಾಡಿ ಹಳೆಯ ದಿನಗಳನ್ನು ಮೆಲುಕು ಹಾಕುವುದು, ಪ್ರಕೃತಿಯೊಂದಿಗೆ ಕಾಲ ಕಳೆಯುವುದು, ಟ್ರೆಕ್ಕಿಂಗ್ ಹೇಗುವುದು, ಹವ್ಯಾಸಗಳಲ್ಲಿ ತೊಡಗಿಕೊಳ್ಳುವುದು ಉದಾಹರಣೆಗೆ ಚಿತ್ರ ಬಿಡಿಸುವುದು, ತೋಟಗಾರಿಕೆ, ಪುಸ್ತಕ ಓದುವುದು, ಸಂಗೀತ ಕೇಳುವುದು ಇತ್ಯಾದಿ... ಇವೆಲ್ಲವೂ ಮನಸ್ಸಿಗೆ ಬೇಕಾದ ವಿಶ್ರಾಂತಿಯನ್ನು ನೀಡುತ್ತವೆ.

ನಾವು ಎಷ್ಟೋ ಬಾರಿ "ಮುಂದಿನ ಗುರಿಯನ್ನು ಸಾಧಿಸಿದ ನಂತರ ಸಂತೋಷವಾಗಿರುತ್ತೇನೆ" ಎಂದು ನಿರ್ಧರಿಸಿ ಸಂತೋಷ ಪಡುವುದನ್ನು ಮುಂದೂಡುತ್ತಲೇ ಇರುತ್ತೇವೆ. ಆದರೆ ಒಂದು ಗುರಿ ತಲುಪಿದ ನಂತರ ಮತ್ತೊಂದು ಗುರಿ ನಮ್ಮ ಗಮನವನ್ನು ಬೇಡುತ್ತದೆ. ಹಾಗಾಗಿ ನಮ್ಮ ಕೈಯಲ್ಲಿರುವ ಈ ಕ್ಷಣವನ್ನೂ ಸಹ ಅನುಭವಿಸುವುದನ್ನು ಕಲಿಯಬೇಕು.

ಸರಳ ಜೀವನವೆಂದರೆ ಆಸೆಗಳನ್ನು ಬಿಟ್ಟು ಬದುಕುವುದು ಎಂದಲ್ಲ. ದೊಡ್ಡ ಕನಸುಗಳನ್ನು ಕಾಣುತ್ತಲೇ ಸಣ್ಣ ಸಂತೋಷಗಳನ್ನು ಸಹ ಅನುಭವಿಸುವುದು. "ನನಗೆ ಈಗ ಸಮಯವಿಲ್ಲ" ಎಂದು ಹೇಳುತ್ತಲೇ ನಮ್ಮ ಬದುಕಿನ ಅಮೂಲ್ಯ ಕ್ಷಣಗಳು ನಮಗೆ ತಿಳಿಯದೆಯೇ ಕೈಜಾರುತ್ತಿವೆ. ಸಂತೋಷಕ್ಕೆ ಬೆಲೆ ಇರಬೇಕಿಲ್ಲ-ಉದಾಹರಣೆಗೆ ಬೆಳಗಿನ ನಡಿಗೆ, ಸಂಗಾತಿಯೊಂದಿಗೆ ಲಘು ಹರಟೆ, ಆಕಾಶವನ್ನು ವೀಕ್ಷಿಸುವುದು, ಮಕ್ಕಳಿಗೆ ಸಮಯ ಕೊಡುವುದು -ಇಂತಹ ಸಂತೋಷಗಳಿಗೆ ಯಾವುದೇ ಬೆಲೆ ಕೊಡಬೇಕಾಗಿಲ್ಲ.

ಪ್ರತಿದಿನವೂ ನಾವು ಅಂದುಕೊಂಡಂತೆ ಇರುವುದಿಲ್ಲ, ಮನೆಯಲ್ಲಿ ಭಿನ್ನಭಿಪ್ರಾಯ ಇರುತ್ತದೆ ಅಥವಾ ಬೇರೆ ಏನಾದರೂ ಸಮಸ್ಯೆ ಇದ್ದೇ ಇರುತ್ತದೆ. ಆದರೂ ಸಹ "ಇಂದಿನ ದಿನ ನನಗೆ ಸಂತೋಷ ನೀಡಿದ ಎರಡು ವಿಷಯಗಳು ಯಾವುದು?" ಎಂದು ಯೋಚಿಸಿದರೆ ಕೃತಜ್ಞತಾ ಅಭ್ಯಾಸ ತಾನಾಗಿಯೇ ಮೂಡುತ್ತದೆ. ಹೋಲಿಕೆಯು ಸಂತೋಷದ ಕಳ್ಳ ಎಂಬುದನ್ನು ಮರೆಯಬಾರದು. ಎಲ್ಲವೂ ನಮ್ಮ ಇಷ್ಟದಂತೆ ನಡೆಯದಿದ್ದರೂ, ಇರುವ ಜೀವನದಲ್ಲಿಯೇ ಸಂತೋಷವನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು".







ಪಲ್ಲವಿ ಮಂಜುನಾಥ್

ನಮ್ಮ ಕೆನಡಾ ವಾಸ

ಅಮೇರಿಕಾದ ನ್ಯೂಜೆರ್ಸಿ ಅಲ್ಲಿ ನಮ್ಮ ವಾಸ, h1b ವೀಸಾ ಮೂರು ವರ್ಷಕೊಮ್ಮೆ ರಿನಿವಲ್ ಮಾಡ್ಸೋ ಕೆಲಸ ಇಲ್ಲಿರುವ ನಮ್ಮಂತವರಿಗೆ ಸರ್ವೇ ಸಾಮಾನ್ಯ. ನಮ್ಮ h1b ವೀಸಾ ಮ್ಯಾಕ್ಸ್ ಔಟ್ ಆದ ಕಾರಣ ಕಂಪನಿ ಅವರು ಕೆನಡಾಗೆ 3ತಿಂಗಳು ಹೋಗಿ ಬನ್ನಿ ಅಷ್ಟರಲ್ಲಿ perm ಅಪ್ರೂವ್ ಆಗುತ್ತೆ ಅಂದ್ರು. ಒಲ್ಲದ ಮನಸಿಂದ ನಾನು ಮಕ್ಕಳು ಮನೆಯವರ ಜೊತೆ ಹೊರಡೋ ತಯಾರಿ ಶುರು ಮಾಡಿದ್ವಿ. ಇದ್ದ ಮನೆ ಸಾಮಾನ್ ಎಲ್ಲ ಸ್ಟೋರೇಜ್ಗೆ ಶಿಫ್ಟ್ ಮಾಡಿ, ಒಂದ್ ಅಷ್ಟುನ ಫ್ರೀ ಆಗಿ ಕೊಟ್ಟು ಅಮೇರಿಕಾಕ್ಕೆ bye ಹೇಳಿ ಹೊರಟ್ವಿ. 3ತಿಂಗಳಿಗೆ ವಾಪಸ್ ಬರ್ತೀವಿ ಅನೋ ಧೈರ್ಯದ ಮೇಲೆ ಜೊತೆಗೆ ಮಕ್ಕಳಿಗೆ ಬೇಸಿಗೆ ರಜಕ್ಕೆ ಇನ್ನೊಂದು ದೇಶ ನೋಡೋ ಸಂಭ್ರಮದಲ್ಲಿ, ನಮ್ಮ ಕಾರ್ ಅಲ್ಲೇ ಬಟ್ಟೆ ಬರೆ ಎಲ್ಲಾ ತುಂಬ್ಕೊಂಡು ಪ್ರಯಾಣ ಶುರುಮಾಡಿದ್ವಿ.

ನಾವು ಹೋಗಿದು ಕೆನಡಾದ ಕ್ಯಾಪಿಟಲ್ "ಒಟ್ಟಾವಾ" ಗೆ, ನ್ಯೂಯೋರ್ಕ್ ಯಿಂದ ಬರಿ ಎರಡು ಗಂಟೆ ಪ್ರಯಾಣ. ಅಮೇರಿಕಾದಲ್ಲೆ ಯಾವುದೊ ಬೇರೆ ಸ್ಟೇಟ್ಗೆ ಬಂದಿದೀವಿ ಅನೋ ಫೀಲಿಂಗ್ ನಮ್ಮಿಗೆ. ಮುಂಚೆನೇ ಅಪಾರ್ಟ್ಮೆಂಟ್ನ ಮೂರು ತಿಂಗಳಿಗೆ ಬುಕ್ ಮಾಡಿದ್ರಿಂದ ನೇರ ಮನೆಗೆ ಹೋದ್ವಿ. ಗೊತ್ತಿಲದ ದೇಶ, ಊರು, ಜನ, ಕಣ್ಣೂಕಟ್ಟಿ ಕಾಡಿಗೆ ಬಿಟ್ಟಂತ ಅನುಭವ ಅಂದ್ರೆ ಇದೆ ಇರ್ಬೇಕು ಅನ್ಸಿದು ಸುಳ್ಳಲ್ಲ. ಹೋಗ್ತಿದ ಹಾಗೆ ಮನೆಯವರ ಕಂಪನಿ ಅಲ್ಲಿ ಕೆಲಸ ಮಾಡೋ ಕೋಲೀಗ್ ಒಬ್ಬರು ನಮ್ಮನ ರಿಸೀವ್ ಮಾಡೋಕೆ ಕಾಯ್ತಿದ್ರು. ಯಾರು ಅಂತ ಮುಖ ಸಹ ನೋಡಿರ್ಲಿಲ, ಆದ್ರೂ ಕಾರ್ ಅಲ್ಲಿ ನಾವು ತಗೊಂಡು ಹೋಗಿದ್ ಸಾಮಾನ್ ಎಲ್ಲ ಶಿಫ್ಟ್ ಮಾಡೋಕೆ ಸಹಾಯ ಮಾಡಿದ್ರು, ಅಪಾರ್ಟ್ಮೆಂಟ್ ಅಲ್ಲಿ ಇದ್ದಿದ್ದು 21ಫ್ಲೋರ್, ನಾವು ಇದ್ದಿದ್ದು 15ನೇ ಫ್ಲೋರು. ನಾನು ಮನೆ ಅಕ್ಕ-ಪಕ್ಕ ಹೊಸದಾಗಿ ಬಂದೋರಿಗೆ, ಹೋಗೋರಿಗೆ ಸಹಾಯ ಮಾಡ್ತಿದ್ದೆ, ದೇವರು ನಮ್ಮಿಗೆ ಸಹಾಯ ಮಾಡೋಕೆ ಇವ್ರ್ ರೂಪದಲ್ಲಿ ಕಳ್ಸಿರ್ಬೇಕು ಅನ್ಕೊಂಡೆ.


ಇವ್ರ್ ಕಂಪನಿ ಅವ್ರೆ 4-5ಫ್ಯಾಮಿಲಿ ಇದ್ದಿದ್ದರಿಂದ ನಾವು ಅನ್ಕೋಳ್ಳದೇ ಇರೋ ಅಷ್ಟು ಹತ್ತಿರ ಆದ್ರೂ. ಒಟ್ಟಾವಾದಲ್ಲಿ ನ್ಯೂಜೆರ್ಸಿಗಿಂತ ಚಳ್ಳಿ ಮತ್ತೆ snow, ಹಾಗಾಗಿ ಹೊರಗಡೆ ಓಡಾಡೋದು ತುಂಬಾನೇಕಷ್ಟ ಆಗ್ತಿತು.ಅಪಾರ್ಟ್ಮೆಂಟ್ ಅಲ್ಲೇ ಪಾರ್ಟಿ ಹಾಲ್ ಇದಿದ್ರಿಂದ ಚಿಕ್ಕ ಪುಟ್ಟ functions ಎಲ್ಲ ಅಲ್ಲೇ ಮಾಡ್ಕೋತಿದ್ವಿ. ಇಂಡಿಯನ್ಸ್ ಸ್ವಲ್ಪ ಜನ ಇದ್ದಿದ್ದು ಗೊತ್ತಾದ್ಮೇಲೆ ಅವ್ರುನ್ನೂ ಪರಿಚಯ ಮಾಡ್ಕೊಂಡು 10ಜನ ಇದ್ದ ಗ್ರೂಪ್, 20ಜನಕ್ಕೆ ಹೆಚ್ಚುಸ್ಕೊಂಡ್ವಿ. 3ತಿಂಗಳಿಗೆ ವಾಪಸ್ ಹೊರಡ್ತೀವಿ ಅಂತ ನಮಗಿಂತ ಜಾಸ್ತಿ ಅವರಗಳೇ ಬೇಜಾರ್ ಮಾಡ್ಕೋತಿದ್ರು. ಬರೋದೇ ಬಂದಿದೀವಿ ಕೆನಡಾದ ಒಂದು ಅಷ್ಟು ಪ್ಲೇಸಸ್ ನೋಡ್ಕೊಂಡೆ ಹೋಗೋಣ ಅಂತ 1ವರ್ಷ ಇರೋ ನಿರ್ಧಾರ ಮಾಡಿದ್ವಿ. ಎಲ್ಲಾ ಹಬ್ಬಗಳನ್ನ ಸ್ನೇಹಿತರ ಜೊತೆ ಆಚರಿಸಿದ್ವಿ, ನಾವು 1ವರ್ಷ ಇರ್ತೀವಿ ಅಂತ ಗೊತ್ತಾದಮೇಲೆ ನಮಗಿಂತ ಖುಷಿ ಪಟ್ಟೋರು ನಮ್ಮ ಸ್ನೇಹಿತರು. ಒಟ್ಟಾವಾ ದಲ್ಲಿ weekends ಆಕ್ಟಿವಿಟಿಸ್ ತುಂಬಾನೇ ಇರ್ತಿತ್ತು, ಅದು ನಾವು ಇದ್ದಿದ್ದು downtown ಅಲ್ಲಿ. ಕ್ವೀನ್ ವಿಕ್ಟೋರಿಯಾ ಒಟ್ಟಾವಾದ ಬ್ಯೂಟಿ ನೋಡಿ ಅದೇ ಕೆನಡಾದ ಕ್ಯಾಪಿಟಲ್ ಮಾಡಿದ್ರಂತೆ. ಕಾರ್ ಪಾರ್ಕಿಂಗ್ ತುಂಬಾ ಕಷ್ಟ ಅಂತ ನೆಡ್ಕೊಂಡು, ಬಸ್ ಅಲ್ಲಿ ಓಡಾಡೋರು. ನಾವು ಅಲ್ಲಿಗೆ ಹೋದ್ಮೇಲೆ 5-8km ಆದ್ರೂ ನೆಡಿಯೋ ಅಭ್ಯಾಸ ಮಾಡ್ಕೊಂಡ್ವಿ. ಫ್ರೆಂಡ್ಸ್ ಗಳ ಜೊತೆ ಮಾತಾಡ್ಕೊಂಡು ನೆಡ್ಕೊಂಡು ಹೋಗ್ತಿದ್ರೆ km ಗಳೆ ಗೊತ್ತಾಗ್ತಿರ್ಲಿಲ.

ಜೊತೆಗೆ ottawa,Quebec,Toronto,casa loma, Niagara falls, grotto, tobermory, Montreal anta ಅಕ್ಕ ಪಕ್ಕ ಇದ್ದ ಒಂದ್ ಅಷ್ಟು ಜಾಗಗಳನ್ನ ನೋಡಿದ್ವಿ. ಅಲಿರೋ ಪ್ಲೇಸಸ್ ನೋಡಿ ಬರಿ ವಿಡಿಯೋ ಫೋಟೋ ಮಾಡ್ಕೊಂಡು ಇಟ್ಕೋಳೋದು ಯಾಕೆ ಅಂತ "ವಿದೇಶದಲ್ಲಿ ಕನ್ನಡತಿ" ಅನ್ನೋ ಯೌಟ್ಯೂಬ್ ಚಾನೆಲ್ ಕೂಡ ಶೂರು ಮಾಡಿದೆ. ಒಂದ್ ವರ್ಷ ಒಂದ್ ತಿಂಗಳು ಮುಗುಸ್ಕೊಂಡು ಮರಳಿ ಗೂಡಿಗೆ ಅಂತ ನ್ಯೂಜೆರ್ಸಿಗೆ ಬಂದ್ವಿ .ಎಲ್ಲರೂನು ಬಿಟ್ಟುಬರುವಾಗ ತುಂಬಾನೇ ದುಃಖ ಆಯ್ತು. ಆದ್ರೆ ಅಷ್ಟು ಜನರ ಪ್ರೀತಿನ ಮೂಟೆಕಟ್ಕೊಂಡು ಬಂದ್ವಿ. ಕೆನಡಾದ ಪಯಣ ನಮ್ಮ ಜೀವನದ ಪುಸ್ತಕದಲ್ಲಿ ಒಂದು ಸುಂದರ ಪುಟ.

ಇಷ್ಟೋತ್ತು ಬೇಜ್ಜಾರಿಲದೇ ಓದಿದ್ದುಕ್ಕೆ ಧನ್ಯವಾದಗಳು.











ಆಶಾ ಚಂದ್ರು

ಶ್ರಾವಣ ಮಾಸದ ನೆನಪುಗಳು

ಆಷಾಢ ಮಾಸ ಕಳೆದು ನಂತರ ಬರುವ ಶ್ರಾವಣ ಮಾಸವು ಸಾಮಾನ್ಯವಾಗಿ ಆಗಸ್ಟ್ ತಿಂಗಳಲ್ಲೇ ಆಗಿರುತ್ತದೆ.

ಈ ಮಾಸದ ಬಗ್ಗೆ ಹೇಳಬೇಕೆಂದರೆ, ಎಪ್ಪತ್ತು–ಎಪ್ಪತ್ತೊಂದರ ದಶಕದಲ್ಲಿ ನಾನು ಆಗ ಸುಮಾರು ಹನ್ನೊಂದು ವರ್ಷದವಳಾಗಿದ್ದೆನೋ ಎನ್ನಿಸುತ್ತದೆ. ಉತ್ಸಾಹ, ಸಂಭ್ರಮಗಳೊಂದಿಗೆ ಮುಗ್ಧತೆಯ ಕುತೂಹಲ ಹೊಂದಿದ್ದ ಆ ಬಾಲ್ಯದ ಸವಿ-ಸವಿ ನೆನಪುಗಳು ಅಲೆ-ಅಲೆಯಾಗಿ ಚಿತ್ತಪಟಲದ ಮೇಲೆ ಚಿತ್ರಿಸುತ್ತಾ ಬರುತ್ತವೆ.

ನನ್ನ ಊರು, ಹಚ್ಚಹಸುರಾದ ದಟ್ಟವಾದ ಗಿಡ-ಮರಗಳು, ಬೆಟ್ಟ-ಗುಡ್ಡಗಳಿಂದ ಕೂಡಿದ ಮಲೆನಾಡಿನ ಸುಂದರವಾದ ನಗರ ಶಿವಮೊಗ್ಗ. ಆಧುನಿಕತೆಯ ಆಡಂಬರವಿಲ್ಲದೇ, ಪ್ರಕೃತಿಯ ಒಡನಾಟದಲ್ಲಿ ಹಾರಾಡುವ ಹಕ್ಕಿಗಳಂತೆ ಸ್ವಚ್ಛಂದವಾಗಿ ಬೆಳೆದ ದಿನಗಳವು. ಹಾಗಾಗಿ ಸಣ್ಣ-ಪುಟ್ಟ ಆಚರಣೆಗಳು ಸಹ ಖುಷಿ-ಖುಷಿಯಾಗಿ ಸಂಭ್ರಮಿಸುವ ಮನೋಭಾವನೆ ಬಳುವಳಿಯಾಗಿ ಬಂದಿದೆ.

ಆಗತಾನೆ ಪ್ರಾಥಮಿಕ ಹಂತದಿಂದ ಪ್ರೌಢಶಾಲೆಗೆ ಕಾಲಿಟ್ಟ ಸಮಯ. ಜಿಟಿ-ಜಿಟಿ ಮಳೆಯಿಂದಾಗಿ ಪ್ರಾರಂಭಗೊಂಡ ಜೂನ್ ತಿಂಗಳಲ್ಲಿ ಶಾಲೆಗೆ ಹೋಗಿ ಬರುವುದೇ ಒಂದು ಮಜಾ, ಖುಷಿ. ಹಾಗೆಯೇ ಆಷಾಢ ಕಳೆಯುತ್ತಿದ್ದಂತೆ ಆರಂಭವಾಗುವ ಶ್ರಾವಣ ಮಾಸವು ಹಬ್ಬ-ಹರಿದಿನಗಳ ಭಂಡಾರವೇ ಆಗಿರುತ್ತದೆ.

ಭೀಮನ ಅಮಾವಾಸ್ಯೆಯಿಂದ ಪ್ರಾರಂಭವಾಗಿ ನಾಗರ ಪಂಚಮಿ ಹಬ್ಬವು ಬಹಳ ಚಂದ. ಸ್ನಾನ ಮಾಡಿ ಮಡಿ ಬಟ್ಟೆ ಹಾಕಿಕೊಂಡು, ಕೈಗೆ ಗೌರೀದಾರ ಕಟ್ಟಿಕೊಂಡು, ಅಮ್ಮನ ಮಾರ್ಗದರ್ಶನದಂತೆ ನಾಗಪ್ಪನಿಗೆ ಹಾಲು ಎರೆಯುವುದು, ಪಕ್ಕದ ಮನೆಯ ಹಿತ್ತಲಲ್ಲಿದ್ದ ಬಾವಿಗೆ ಹೋಗಿ ಗಂಗೆ ಪೂಜೆ ಮಾಡಿ ಉಡಿ ತುಂಬಿಸಿಕೊಂಡು ಮನೆಗೆ ಬಂದು, ಎಡೆ ಮಾಡಿದ ಸೇಂಗಾ, ಎಳ್ಳು, ಕಡಲೆಹಿಟ್ಟಿನ ಉಂಡೆಗಳು ಮತ್ತು ಚಿಗಳಿ ತಂಬಿಟ್ಟುಗಳಿಗೆ ಮರಳು-ಮರಳಿನಂತಿರುವ ತುಪ್ಪ ಹಾಕಿಕೊಂಡು ತಿನ್ನುತ್ತಿದ್ದ ಆ ದಿನಗಳನ್ನು ಹೇಗೆತಾನೆ ಮರೆಯಲು ಸಾಧ್ಯ?

ಅದೇ ತಿಂಗಳಲ್ಲಿ ಬರುವ ಮಂಗಳಗೌರೀ, ಶುಕ್ರಗೌರೀ ಪೂಜೆಗಳು ಸಹ ಒಂದು ವಿಶೇಷ ಸಂಭ್ರಮವೇ. ಆ ದಿನ ನಾವು ಬೇಗನೆ ಎದ್ದು, ಬಾಗಿಲಿಗೆ ನೀರು ಹಾಕಿ, ಮನೆಯ ಅಂಗಳದಲ್ಲಿ ರಂಗೋಲೆಯನ್ನು ಹಾಕಿ, ನಮ್ಮ ಮನೆಯ ಹಿತ್ತಲಲ್ಲಿ ಬೆಳೆದ ಗಿಡಗಳಿಂದ ಮಳೆಹನಿಯ ಮುತ್ತುಗಳಿಂದ ನಳನಳಿಸುವ ದಾಸವಾಳ ಹೂವು, ಗುಲಾಬಿ, ಕಾಕಡಾ, ಸುರಳಿ ಹೂವು, ಮಲ್ಲಿಗೆ, ಸಂಪಿಗೆ, ತುಂಬೆ ಇನ್ನೂ ಅನೇಕ ತರಾವರಿ ಹೂವುಗಳನ್ನು ಗಿಡಗಳಿಂದ ಕಿತ್ತು ತಂದು ತಟ್ಟೆಯಲ್ಲಿ ಒಪ್ಪವಾಗಿ ಜೋಡಿಸಿಕೊಟ್ಟು, ಅಮ್ಮನಿಗೆ ಸಹಾಯ ಮಾಡಿದ ಖುಷಿಯಲ್ಲಿ ಶಾಲೆಗೆ ಓಡುತ್ತಿದ್ದೆವು.

ಈ ಮಾಸದಲ್ಲಿ ಬರುವ ಇನ್ನೂ ಅನೇಕ ಸಡಗರ-ಸಂಭ್ರಮಗಳಲ್ಲಿ, ೧೯೪೭ರ ಆಗಸ್ಟ್ ಹದಿನೈದರಂದು ನಮ್ಮ ಭಾರತ ದೇಶವು ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಹೊಂದಿ ಸ್ವಾತಂತ್ರ್ಯ ಪಡೆದ ಮಹತ್ತರ ದಿನವಾಗಿದೆ. ದೇಶಭಕ್ತರಾದ ರಾಜರು, ರಾಣಿಯರು, ಸಂಘ-ಸಂಸ್ಥೆಗಳ ಮುಖಂಡರು, ಜನಸಾಮಾನ್ಯರಾದ ಪ್ರಜೆಗಳು ತಮ್ಮ ತನು, ಮನ, ಧನಗಳೊಂದಿಗೆ ತಮ್ಮ ಪ್ರಾಣವನ್ನೂ ಸಹ ತ್ಯಾಗ ಮಾಡಿ ಪಡೆದ ಸ್ವಾತಂತ್ರ್ಯೋತ್ಸವವನ್ನು ಇಡೀ ದೇಶವೇ ಸಡಗರ-ಸಂಭ್ರಮದಿಂದ ಒಂದು ಹಬ್ಬದಂತೆ ಆಚರಿಸುವುದು ಈ ಮಾಸದ ಒಂದು ವಿಶೇಷ ಆಕರ್ಷಣೆಯಾಗಿದೆ.

ಈ ಮಾಸದಲ್ಲಿ ಬರುವ ಇನ್ನೊಂದು ಮಹತ್ತರವಾದ ಹಬ್ಬವೆಂದರೆ ಶ್ರೀ ಕೃಷ್ಣ ಜನ್ಮಾಷ್ಟಮಿ. ಶ್ರೀ ಕೃಷ್ಣ ಹುಟ್ಟಿದ ಈ ಪುಣ್ಯದಿನವನ್ನೂ ಸಹ ದೇಶದ ಎಲ್ಲ ಭಾಗದ ಜನರು ವಿಜೃಂಭಣೆಯಿಂದ ಆಚರಿಸುವರು. ನಮ್ಮ ಶಾಲೆಯಲ್ಲೂ ಸಹ ಆ ದಿನವನ್ನು ಆಚರಣೆ ಮಾಡಿ, ಅವಲಕ್ಕಿ ಬೆಲ್ಲದಿಂದ ಪ್ರಸಾದ ಮಾಡಿ, ಮಕ್ಕಳಿಗೆಲ್ಲ ಹಂಚುತ್ತಿದ್ದರು. ತುಂಬ ರುಚಿಯಾಗಿರುತ್ತಿತ್ತು.

ಈ ಎಲ್ಲಾ ಸಡಗರ-ಸಂಭ್ರಮದಿಂದ ಕೂಡಿದ ಶ್ರಾವಣ ಮಾಸವು ನಮ್ಮ ನಾಡು, ನುಡಿ, ಸಂಸ್ಕೃತಿಗಳನ್ನು ಒಳಗೊಂಡ ನಮ್ಮ ಪರಂಪರೆಯಲ್ಲಿ ಹಾಸುಹೊಕ್ಕಾಗಿ ಇರುವಂತೆ ಕಾಯ್ದುಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹಾಗಾಗಿ ಇಂದಿನ ಮಕ್ಕಳಿಗೆ ಈ ಎಲ್ಲ ಆಚರಣೆಗಳ ಮಹತ್ವವನ್ನೂ ಮತ್ತು ವೈಜ್ಞಾನಿಕ ವಿಚಾರಧಾರೆಯೊಂದಿಗೆ ತಿಳಿಸಬೇಕಾದದ್ದು ತುಂಬಾ ಅಗತ್ಯವಾಗಿದೆ.

ಶ್ರಾವಣ ಮಾಸದ ನನ್ನ ಈ ಅನುಭವವನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ಬೃಂದಾವನ ವಾಣಿ ತಂಡದವರಿಗೆ ಧನ್ಯವಾದಗಳನ್ನು ತಿಳಿಸುತ್ತಾ ನನ್ನ ಈ ಬರಹವನ್ನು ಮುಗಿಸುತ್ತಿರುವೆ.



ಸುಪ್ರಿಯ ಹೆಚ್ ಎಂ







ಕಥಾ ಸಂಕಲನ





ಎಂ.ವಿ. ಶಶಿಭೂಷಣ ರಾಜು

ಜನಿವಾರ

ಯಜ್ಞೋಪವೀತಂ ಪರಮಂ ಪವಿತ್ರಂ, ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್ |
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ, ಯಜ್ಞೋಪವೀತಂ ಬಲಮಸ್ತು ತೇಜಃ ||
(ಜನಿವಾರವು ಅತಿ ಪವಿತ್ರವಾದದ್ದು. ಅದು ಸೃಷ್ಟಿಕರ್ತನಾದ ಬ್ರಹ್ಮನಿಂದ ಮೊದಲು ಉತ್ಪತ್ತಿಯಾಯಿತು. ಇದು ದೀರ್ಘಾಯುಷ್ಯ, ಶುದ್ಧತೆ, ಮತ್ತು ತೇಜಸ್ಸನ್ನು ನೀಡುತ್ತದೆ. ಈ ಯಜ್ಞೋಪವೀತವು ನನಗೆ ಬಲ ಮತ್ತು ತೇಜಸ್ಸನ್ನು ನೀಡಲಿ).

ಉಪನಯನ ನಡೆದಾಗ ಅಪ್ಪ ಹತ್ತಿರ ಕರೆಸಿಕೊಂಡು, ಜನಿವಾರದ ಅರ್ಥ, ಮಹತ್ವ ತಿಳಿಸಿದ್ದರು. ಯಾವುದೇ ಸಮಯದಲ್ಲಿ ನಿನ್ನಲಿ ಕೆಟ್ಟ ಆಲೋಚನೆ ಬಂದರೆ ಒಂದು ಸಲ ಜನಿವಾರವನ್ನು ಮುಟ್ಟು, ಹಾಗೇ ಮನ ತಿಳಿಯಾಗುತ್ತದೆ ಎಂದಿದ್ದರು. ಯಾವುದು ಕೆಟ್ಟದ್ದು ಎಂಬ ಅರಿವು ಆ ವಯಸ್ಸಿನಲ್ಲಿ ಅಷ್ಟಾಗಿ ತಿಳಿಯದಿದ್ದರೂ, ಸಮಾಜ ಗುರುತಿಸುವ ಅಪ್ಪ, ಅಮ್ಮ ಆಗಾಗ ಹೇಳುವ- ಸುಳ್ಳು ಹೇಳಬಾರದು, ಕದಿಯಬಾರದು, ನಿಂದಿಸಬಾರದು, ಜಗಳ ಆಡಬಾರದು ಎನ್ನುವ ಕೆಲವನ್ನು ತಪ್ಪು ಎಂದು ಗುರುತಿಸಿಕೊಂಡಿದ್ದ. ಬೆಳೆಯುತ್ತಾ ಇದರ ತದ್ವಿರುದ್ಧವಾಗಿ ಎಲ್ಲರೂ ನಡೆದುಕೊಳ್ಳುವುದ ನೋಡಿ ಗೊಂದಲಗೊಂಡಿದ್ದ. ಸುಳ್ಳು ಹೇಳಬಾರದು ಎಂದು ಹೇಳಿದ್ದ ಅಪ್ಪ ಸ್ವತಃ ಸುಳ್ಳು ಹೇಳದಿದ್ದರೂ (ಅಥವಾ ತಾನು ಕಾಣದಿದ್ದರೂ) ಬಂಧುಗಳಲ್ಲಿ ಕೆಲವರು ಸುಳ್ಳು ಹೇಳುವುದನ್ನು ಕಂಡಿದ್ದ, ಅದನ್ನು ಪ್ರಶ್ನಿಸಿದಾಗ ಸಣ್ಣದರಲ್ಲಿ ಇದೆಲ್ಲ ನಿನಗೆ ಅರ್ಥವಾಗುವುದಿಲ್ಲ ಆಮೇಲೆ ಅರ್ಥವಾಗುತ್ತದೆ ಎಂದು ಬಾಯಿ ಮುಚ್ಚಿಸುತ್ತಿದ್ದರು. ಎಲ್ಲದರ ಮೇಲೂ ತಟ್ಟನೆ ಆಸಕ್ತಿ ಕಳೆದುಕೊಳ್ಳುವ ಮನೋಹರನು, ಯಾವುದರ ಬಗ್ಗೆಯೂ ಆಳವಾಗಿ ಚರ್ಚಿಸುತ್ತಿರಲಿಲ್ಲ.
ಅಮ್ಮ ಎಂದರೆ ಅಡಿಗೆಮಾಡುವುದು, ಊಟಕ್ಕೆ ಕರೆಯುವುದು, ಇಷ್ಟೇ ಅವನು ನೋಡಿದ್ದು, ಆಗಾಗ ಒಂದು ಮಾತು, ಇಲ್ಲ ತಮ್ಮಲ್ಲೇ ಹಾಡಿಕೊಳ್ಳುತಿದ್ದರು. ಪುರಂದರದಾಸರ ಕೀರ್ತನೆಗಳನ್ನು ಸೊಗಸಾಗಿ ಹಾಡುತ್ತಿದ್ದರು. ಅವರಿಗಿರುವ ಇನ್ನೊಂದು ಕೆಲಸವೆಂದರೆ ಹಳ್ಳಿಯ ಹೆಂಗಸರ ಜಗಳವನ್ನು ಬಿಡಿಸುವುದು, ಅವರ ಮಾತಿಗೆ ಬೆಲೆಯಿದ್ದಿದ್ದರಿಂದ ಅವರ ಮಾತು ನಡೆಯುತಿತ್ತು.
ದೊಡ್ಡವನಾದಮೇಲೆ, ಜನಿವಾರ ಅವನನ್ನು ಕೆಲವು ಸಲ ಕಾಪಾಡಿದ್ದು ನಿಜವಾದರೂ, ಕೆಲವು ಸಲ ಗೊಂದಲದಲ್ಲಿ ದೂಡುತ್ತಿತ್ತು. ಕಾಪಾಡಿದ ಕೆಲವೊಂದರಲ್ಲಿ ಅವನಿಗೆ ನೆನಪಾಗುವುದು ಇದೊಂದು.
ಓದೆಲ್ಲಾ ಮುಗಿದಮೇಲೆ ಅವನು ಕೆಲಸಕ್ಕೆ ಸೇರಿಕೊಂಡು, ಬೆಂಗಳೂರಿನಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಹಿಡಿದು ವಾಸಿಸುತ್ತಿದ್ದ. ಅವನಿಗೆ ಅಡುಗೆಮಾಡಲು ಅಷ್ಟೇನೂ ವಯಸ್ಸಾಗಿರದ, ಸುಂದರವಾಗಿದ್ದ, ಮಹಿಳೆಯೊಬ್ಬರು ಅಡುಗೆ ಮಾಡಿಕೊಡುತ್ತಿದ್ದರು. ಅವರು ಬೇರೆಲ್ಲಿಯೋ ವಾಸವಾಗಿದ್ದು ಬೆಳಿಗ್ಗೆ ಹಾಗು ರಾತ್ರಿ ಅಡುಗೆಮಾಡಿಟ್ಟು ಹೋಗುತಿದ್ದರು, ಅವರ ಸಂಸಾರದ ಬಗ್ಗೆ ಅಷ್ಟೇನೂ ಅವನಿಗೆ ತಿಳಿದಿರಲಿಲ್ಲ, ಅವರನ್ನು ಪರಿಚಯಿಸಿದ ಪಕ್ಕದಮನೆಯವರು ಅವರು ವಿಧವೆ ಎಂದಿದ್ದರು, ಅವರ ಹೆಸರು ವಿಶಾಲಾಕ್ಷಿ ಎಂದಿದ್ದರು, ಮನೋಹರನಿಗೆ ಇಷ್ಟು ಚಿಕ್ಕವಯಸ್ಸಿನಲ್ಲೇ ವಿಧವೆಯಾದರಲ್ಲ ಎಂದು ಮರುಕ ಉಂಟಾಗಿತ್ತು. ಹೀಗಿರಲು, ಒಂದು ದಿನ ರಾತ್ರಿ, ಮನೋಹರ ಮಲಗಲು ಸಿದ್ದತೆ ನಡೆಸುತ್ತಿರುವಾಗ, ಬಾಗಿಲು ಬಡಿಯುವ ಸದ್ದಾಯಿತು, ಬಾಗಿಲು ತೆಗೆದರೆ ವಿಶಾಲಾಕ್ಷಿ ನಿಂತಿದ್ದಳು.
"ಏನಾಯಿತು" ಎಂದ ಮನೋಹರ.
"ಹೊರಗಡೆ ಹೋಗಿದ್ದೆ, ಮನೆಯ ಬೀಗದ ಕೈ ಕಳೆದುಹೋಗಿದೆ, ಈ ರಾತ್ರಿ ಇಲ್ಲಿ ಮಲಗಬಹುದೇ, ಬೆಳಿಗ್ಗೆ ಬೀಗ ಹೊಡೆಸಿ ಹೊಸ ಬೀಗ ತರುತ್ತೇನೆ " ಎಂದಳು.
ಮನೋಹರ "ಸರಿ ಬನ್ನಿ " ಎಂದು ಒಳಹೋದ.
ಒಂದೇ ಕೋಣೆಯ ಮನೆಯಾದ್ದರಿಂದ, ವಿಶಾಲಾಕ್ಷಿ ಅಡುಗೆಮನೆಯಲ್ಲಿ ಮಲುಗುತ್ತೇನೆ ಎಂದಳು. ಮನೋಹರ ಅವಳಿಗೆ ಚಾಪೆ, ದಿಂಬು ಮತ್ತು ರಗ್ಗನ್ನು ಕೊಟ್ಟು, ತಾನು ಬಂದು ಮಲಗಿದ. ಕೆಲ ಕಾಲ ನಿದ್ರೆ ಹತ್ತಲಿಲ್ಲ, ಇಂತಹ ಕೆಲ ಸನ್ನಿವೇಶಗಳನ್ನು ಅವನು ಪುಸ್ತಕಗಳಲ್ಲೂ, ಸಿನೆಮಾಗಳಲ್ಲೂ ಓದಿದ್ದ, ನೋಡಿದ್ದ. ವಿಶಾಲಾಕ್ಷಿ ಮನೆಯ ಬೀಗದ ಕೈ ನಿಜವಾಗಲೂ ಕಳೆದುಹೋಗಿದೆಯೇ ಅಥವಾ ಸುಳ್ಳು ಹೇಳಿದಳೇ ಎಂದುಕೊಂಡ, ಯಾವಾಗಲೂ ಅವಳು ಅನುಚಿತವಾಗಿ ನಡೆದುಕೊಂಡಿರಲಿಲ್ಲ,

ಇಂತಹ ವಿಶ್ಲೇಷಣೆಯಲ್ಲಿ ಮಲಗಿದ್ದ ಅವನಿಗೆ ವಿಶಾಲಾಕ್ಷಿ ಒಂದು ತೆರೆನಾದ ಶಬ್ದ ಮಾಡುತ್ತಿದ್ದಾಳೆ ಎನಿಸಿತು, ಮನಸ್ಸಿಗೆ ಏನೋ ಆಗುತ್ತಿದೆ ಅನಿಸಿತು, ಒಂದೊಂದು ಸಲ ಅವಳು ಉರುಳಿ ಪಕ್ಕಕ್ಕೆ ಬರುತ್ತಿದ್ದಾಳೆ, ಅನಿಸಿತು.

ಒಂದೊಂದು ಸಲ ಅವಳು ಬರಲಿ ಎಂದೂ, ಒಂದೊಂದು ಸಲ ಬೇಡ ಎಂದೂ ಅನಿಸುತಿತ್ತು. ಎದ್ದು ಲೈಟ್ ಹಾಕಿ ಏನಾದರೂ ಓದೋಣವೇ ಎನಿಸಿತು, ಎದ್ದರೆ ಅಪಾರ್ಥಮಾಡಿಕೊಂಡಾಳು ಎಂದು ಹಾಗೆ ಮಲಗಿದ. ಮನಸಿನಲ್ಲಿ ಏನೇನೂ ಕಲ್ಪನೆಗಳು. ಹೀಗೆ ಆದರೆ ಬೆಳಿಗ್ಗೆ ಕೆಲಸಕ್ಕೆ ಹೋದ ಹಾಗೇ ಎಂದುಕೊಂಡ, ತಟ್ಟನೆ ಅಪ್ಪ ಹೇಳಿದ್ದ ಮಾತು ನೆನಪಾಯಿತು, ಅವರು ಹೇಳಿದಂತೆ ಜನಿವಾರವನ್ನು ಬಿಗಿಯಾಗಿ ಹಿಡಿದುಕೊಂಡ, ಹಾಗೇ ಹಿಡಿದುಕೊಂಡು ಅಪ್ಪ ಹೇಳಿದ ಮಾತುಗಳನ್ನು ಪದೇ ಪದೇ ನೆನಪಿಸಿಕೊಂಡ, ಹಾಗೆಯೇ ನಿದ್ರೆಗೆ ಜಾರಿದ. ಬೆಳಿಗ್ಗೆ ಎದ್ದಾಗ ವಿಶಾಲಾಕ್ಷಿ ಆಗಲೇ ತಿಂಡಿ ಸಿದ್ದಮಾಡುತಿದ್ದಳು, ಮಾತನಾಡಿಸಿದಾಗ ಎಂದಿನಂತೆ ಇದ್ದಳು. ಜನಿವಾರ ಕಾಪಾಡಿತೇ ಅಥವಾ ಅಪ್ಪ ಕಾಪಾಡಿದರೆ ಎಂದು ತನ್ನನ್ನೇ ಪ್ರಶ್ನಿಸಿಕೊಂಡ ಮನೋಹರ.

ಹಾಗೆ ಜನಿವಾರದಿಂದ ಜೀವಿಸುತ್ತಿದ್ದ ಮನೋಹರನಿಗೆ ಅದನ್ನು ತೆಗೆದಿಡುವ ಸಮಯ ಬಂತು.

ಮನೋಹರ ಎಲ್ಲಿ ಅನ್ಯಾಯ ಕಂಡರೆ ಅಲ್ಲಿ ಪ್ರತಿಭಟನೆ ಮಾಡುತ್ತಿದ್ದ. ಅದು ಸಣ್ಣದಿರಲಿ, ದೊಡ್ಡದಿರಲಿ. ಅಪಾರವಾಗಿ ಓದುತ್ತಿದ್ದ ಮನೋಹರನಿಗೆ ತನ್ನ ಚಿಂತನೆಗಳನ್ನು ಅಸಮಾನತೆ, ಜಾತೀಯತೆ, ಧರ್ಮಾಂಧತೆ ಹೀಗೆ ಸಮಾಜದ ನ್ಯೂನ್ಯತೆಗಳನ್ನು ಲೇಖನಗಳ ಮೂಲಕ ವ್ಯಕ್ತಪಡಿಸಿ, ಎಲ್ಲ ಪತ್ರಿಕೆಗಳಿಗೆ ಕಳುಹಿಸುತ್ತಿದ್ದ. ಅವನ ಲೇಖನಗಳನ್ನು ಓದಿ, ಅವನಿಗೆ ದೊಡ್ಡ ಅಭಿಮಾನಬಳಗವೇ ಹುಟ್ಟಿಕೊಂಡಿತ್ತು. ಒಂದು ಸಣ್ಣ ಹಳ್ಳಿಯಿಂದ ಬಂದಿದ್ದವನಾದ್ದರಿಂದ ಅವನ ಮೂಲ, ಜಾತಿಯನ್ನು ಮುಚ್ಚಿಡುವುದು ಅಸಾಧ್ಯವಾಗಲಿಲ್ಲ.

ಹೀಗಿದ್ದಾಗ, ಒಂದು ದಿನ ದಲಿತ ಸಂಘವೊಂದು ತಾವು ನಡೆಸುತ್ತಿರುವ ಸಮಾರಂಭವೊಂದಕ್ಕೆ ಆಹ್ವಾನಿಸಿದರು. ಹೊರಡುವ ಮುನ್ನ ಇದ್ದಕ್ಕಿದ್ದಂತೆ ತಾನು ಧರಿಸಿದ ಜನಿವಾರದ ನೆನಪಾಯಿತು. ಜನಿವಾರ ಧರಿಸಿ ಸಮಾರಂಭಕ್ಕೆ ಹೋದರೆ ತನ್ನನು ಒಂದು ಜಾತಿಯಿಂದ ಗುರುತಿಸಿ ತನ್ನನ್ನು ಅನುಮಾನಿಸಬಹದು ಎಂದುಕೊಂಡು ಜನಿವಾರ ತೆಗೆದಿಟ್ಟ. ಅಪ್ಪನ ನೆನಪಾಯಿತು, ಕ್ಷಮಿಸಿ ಅಪ್ಪ ಎಂದುಕೊಂಡ. ಸಮಾರಂಭಕ್ಕೆ ಹೋಗಿ "ದಲಿತರ ನಗರ ವಾಸ" ಎನ್ನುವ ವಿಷಯದ ಬಗ್ಗೆ ಅದ್ಭುತವಾಗಿ ಮಾತನಾಡಿ ಎಲ್ಲರ ಮೆಚ್ಚುಗೆಗಳಿಸಿದ. ಎಲ್ಲರೂ ಇವ ನಮ್ಮವ ಎಂದುಕೊಂಡು ಜೈಕಾರ ಹಾಕಿದರು.

ಜಾತಿಯ ಬಗ್ಗೆ ಮಮಕಾರವಿಲ್ಲದ ಮನೋಹರ ತನ್ನ ಜಾತಿ ಗುರುತಿಸುವ ಜನಿವಾರ ಧರಿಸುವುದೇ ಬೇಡ ಎಂದು ತೀರ್ಮಾನಿಸಿಬಿಟ್ಟ. ಹಬ್ಬವೊಂದಕ್ಕೆ ಊರಿಗೆ ಹೋದ ಮನೋಹರನ ದೇಹದ ಮೇಲೆ ಜನಿವಾರವಿಲ್ಲದ್ದನ್ನು ನೋಡಿದ ಅಪ್ಪ ಸಿಡಿಮಿಡಿಗೊಂಡರು. ಅಪ್ಪನಿಗೆ ಅರ್ಥಮಾಡಿಸಿಕೊಡುವಷ್ಟು ದೊಡ್ಡವ ತಾನಲ್ಲ ಎಂದು ತಿಳಿದಿದ್ದ ಮನೋಹರ ಯಾವುದೇ ಮಾತನಾಡಲಿಲ್ಲ. ಅವರ ಮೇಲೆ ಸಿಟ್ಟು ಬರಲಿಲ್ಲ. ಸರಿ ಹಾಕಿಕೊಳ್ಳುತ್ತೇನೆ ಎಂದು ಹೇಳಿ ಸುಮ್ಮನಾದ. ಬೆಂಗಳೂರಿಗೆ ಬಂದಮೇಲೆ ಜನಿವಾರ ಧರಿಸಲು ಹೋಗಲಿಲ್ಲ.

ಮನೋಹರನಿಗೆ ತನ್ನ ಕಂಪನಿಯಿಂದ ಅಮೇರಿಕಾಗೆ ಹೋಗಲು ಅವಕಾಶ ಕೊಡಲಾಯಿತು. ಮನೆಯಲ್ಲಿ ಎಲ್ಲರಿಗೂ ಇದರಿಂದ ಸಂತಸವಾಯಿತು. ಆದರೆ ಮನೋಹರನ ತಂದೆ ಒಂದು ಷರತ್ತನ್ನು ಇಟ್ಟರು, ಅದೆಂದರೆ ಮನೋಹರ ಜನಿವಾರ ಧರಿಸಿದಮೇಲೆ ಮಾತ್ರ ಅವನಿಗೆ ಅಮೇರಿಕಾಗೆ ಹೋಗಲು ಅಪ್ಪಣೆ ಕೊಡುತ್ತೇನೆಂದು. ಸ್ವಲ್ಪ ವಾಗ್ವಾದದ ನಂತರ ಮನೋಹರ ಅದಕ್ಕೆ ಒಪ್ಪಿದ. ಹೇಗಿದ್ದರೂ ಅಮೆರಿಕೆಯಲ್ಲಿ ಯಾರಿಗೂ ಜನಿವಾರದ ಬಗ್ಗೆ ತಿಳಿದಿಲ್ಲ ಹಾಗು ಅಲ್ಲಿ ಜಾತಿ ಪದ್ಧತಿ ಇಲ್ಲವಾದ್ದರಿಂದ ಅವನಿಗೆ ಜನಿವಾರ ಧರಿಸಲು ಅಡಚಣೆ ಕಾಣಲಿಲ್ಲ. ಮನೋಹರನ ತಂದೆಗೆ ಸಂತೋಷವಾಯಿತು, ಜನಿವಾರ ನನ್ನ ನೆನಪೂ ಕೂಡ ಎಂದರು.

ಮನೋಹರ ಅಮೇರಿಕಾಗೆ ಬಂದಮೇಲೆ ಜನರು ಕಾಣಿಸದಿರುವುದು, ದಾರಿಯಲ್ಲಿ ಅಪರೂಪವಾಗಿ ಕಾಣಸಿಕ್ಕರೂ ಪರಿಚಯವಿಲ್ಲದಿದ್ದರೂ "ಹಾಯ್ ಹೌ ಆರ್ ಯು" ಎಂದು ನಗೆಬೀರುವುದು ಖುಷಿಯ ಸಂಗತಿ ಎನಿಸಿತು. ಆಫೀಸಿನಲ್ಲಿ ಎಲ್ಲರೂ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಸ್ವಲ್ಪ ದಿನಗಳಲ್ಲಿಯೇ ಕೆಲವರು ಹತ್ತಿರದ ಸ್ನೇಹಿತರಾದರು.

ಅಲ್ಲಿ ಸಿಗರೇಟ್ ಸೇದುವುದು, ಮದ್ಯಪಾನ ಮಾಡುವುದು ತುಂಬಾ ಸಹಜವೆಂಬಂತೆ ಹೆಣ್ಣು, ಗಂಡು ಭೇದವಿಲ್ಲದೇ ಮಾಡುತ್ತಿರುವುದ ಕಂಡು ಸೋಜಿಗವೆನಿಸಿತು. ಸಾಮಾನ್ಯವಾಗಿ ವಾರಾಂತ್ಯದಲ್ಲಿ ಪಾರ್ಟಿ ನಡೆಯುತಿತ್ತು. ಅಲ್ಲಿ ಎಲ್ಲಾ ಸೇರಿ ಹರಟೆ ಹೊಡೆಯುತ್ತಾ ಕುಡಿಯುತ್ತಿದ್ದರು. ಭಾರತದಲ್ಲಿ ಬೆಳೆದ ಮನೋಹರನಿಗೆ ಕುಡಿಯುವುದು ಮಹಾಪಾಪವಾಗಿತ್ತು. ಎಷ್ಟೇ ಬಲವಂತ ಮಾಡಿದರೂ ತನ್ನ ಜನಿವಾರವನ್ನು ಮುಟ್ಟಿ, ಇಲ್ಲಾ ಹಿಡಿದುಕೊಂಡು ನಯವಾಗಿ ತಿರಸ್ಕರಿಸುತಿದ್ದ. ಒಂದೊಂದು ಸಲ ಮನಸ್ಸಿನಲ್ಲಿ ಒಂದು ಸಲ ರುಚಿ ನೋಡಲೇ ಎಂಬ ಬಯಕೆ ಮೂಡುತಿತ್ತು. ಬಯಕೆಯನ್ನು ಬಲವಂತವಾಗಿ ಅದಿಮಿಡುತಿದ್ದ.

ಹೀಗೆ ತನ್ನ ಆಸೆಗಳನ್ನೆಲ್ಲಾ ಕಟ್ಟಿಹಾಕುತ್ತಾ ಜೀವಿಸುತ್ತಿರುವಾಗ ಹೊಸತೊಂದು ತೊಂದರೆ ಶುರುವಾಯಿತು. ಆಫೀಸಿನಲ್ಲಿ ಮನೋಹರನ ಕೆಲಸದ ಜ್ಞಾನಕ್ಕೆ ಅವನ ಸಹಾಯ ಮಾಡುವ ಗುಣಕ್ಕೆ ಎಲ್ಲರೂ ಮನಸೋತಿದ್ದರು. ಅಲ್ಲಿ ಹಲವಾರು ಸುಂದರ ಹುಡುಗಿಯರಿದ್ದರು. ಅವನಿಗೆ ಎಲ್ಲರೂ ತುಂಬಾ ಹತ್ತಿರದವರಾಗಿದ್ದರು. ಆಗಾಗ ತಮ್ಮ ದೇಹ ಸೋಕಿಸುತ್ತಿದ್ದರು. ತುಂಡುಬಟ್ಟೆ ಧರಿಸುತ್ತಿದ್ದರು. ಎಷ್ಟೇ ಮನಸ್ಸನ್ನು ನಿಗ್ರಹಿಸಿಕೊಂಡರೂ ಆಗಾಗ ಹುಡುಗಿಯರ ಸನಿಹಕೆ ಮನ ಹಾತೊರಿಯುತ್ತಿತ್ತು. ಜನಿವಾರವನ್ನು ಗಟ್ಟಿಯಾಗಿ ಹಿಡಿದುಕೊಂಡು ಮಲಗುತ್ತಿದ್ದ. ಹೊರಗಡೆಯೂ ಅನೇಕ ಹುಡುಗಿಯರನ್ನು ನೋಡಿ ಮನ ಮತ್ತೆ ಮತ್ತೆ ನೋಡಲು ಸೂಚಿಸುತಿತ್ತು.

ಎಲ್ಲರೂ ವಾರಾಂತ್ಯದಲ್ಲಿ ಪಾರ್ಟಿ ಮಾಡುವಾಗ ತರಾವರಿ ಮದ್ಯಗಳನ್ನು ಕುಡಿದು, ಅದು ಅಮೃತವೇನೋ ಎಂಬಂತೆ ಕಣ್ಣು ಮುಚ್ಚಿ ಆನಂದಿಸುವಾಗ, ಮನೋಹರನಿಗೆ ಒಂದುಸಲ ರುಚಿ ನೋಡಲೇ ಅನಿಸಿದ್ದುಂಟು. ಸಿಗರೇಟನ್ನು ಆಕರ್ಷಿಕವಾಗಿ ಸೇದುವ ಸ್ನೇಹಿತರನ್ನು ಕಂಡು ಆಕರ್ಷಿತನಾಗಿದ್ದೂ ಉಂಟು.

ಹುಡುಗಿಯರ ಸಹವಾಸಕ್ಕೆ ಹೋಗುವುದು ತರವಲ್ಲದಿದ್ದರೂ, ಅವರನ್ನು ನೋಡುವುದು ಕೂಡ ತಪ್ಪೇ ಎಂದು ಮನಸ್ಸು ಕೇಳುತ್ತಿತ್ತು. ಹೆಣ್ಣೆಂದರೆ ಬರೀ ಕೆಟ್ಟ ಆಲೋಚನೆ ಏಕೆ ಅವರು ಸ್ನೇಹಿತರಾಗಬಾರದೇಕೆ ಎಂದು ಮನಸ್ಸು ಕೇಳುತ್ತಿತ್ತು. ಸ್ನೇಹಿತ ಹೇಳುತ್ತಿದ್ದ ಹೆಣ್ಣನ್ನು ಒಂದು ಹೂವಿನಂತೆ ಸೌಂದರ್ಯದಾನುಭೂತಿಯಂತೆ ನೋಡಬೇಕು ಅಂತೆಯೇ ಹೂವನ್ನು ವಶ ಪಡಿಸಿಕೊಳ್ಳುವ ಆಸೆ ಇರಬಾರದು. ಇಡಿಯಾಗಿ ನೋಡಬೇಕು ಅಂಗಾಂಗಗಳನ್ನು ಬೇರ್ಪಡಿಸಿ ಅಲ್ಲ ಎಂದು. ಅದು ನಿಜ ಎಂದು ಮನಸೊಪ್ಪಿದರೂ ಕೆಲುವು ಸಲ ಕಣ್ಣು ಸೋಲುತ್ತಿತ್ತು . ಆಗ ಪಾಪ ಪ್ರಜ್ಞೆಯಿಂದ ಮನಸ್ಸು ವಿಲ ವಿಲ ಒದ್ದಾಡುತ್ತಿತ್ತು. ತನ್ನ ಪೋಷಣೆಯೇ ಇದಕ್ಕೆ ಕಾರಣವೇ, ಅತೀ ಸನಾತನಿಯಾಗಿದ್ದೆ ಅಥವಾ ಜನಿವಾರದ ಪ್ರಭಾವವೇ ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಿದ್ದ.

ಹೆಣ್ಣಿನ ಆಸೆಗೆ ಕಡಿವಾಣ ಹಾಕಿಕೊಂಡರೂ ಕುಡಿಯುವ ಆಸೆ ಮನದಲ್ಲಿ ಮೂಡುತ್ತಿತ್ತು ಯಾವುದೇ ಮನೆಗಳಲ್ಲಿ ಪಾರ್ಟಿ ಆದರೂ ಅಥವಾ ಆಫೀಸ್ ಪಾರ್ಟಿ ಆದರೂ ಕುತೂಲಹದಿಂದ ಶೀಶೆಗಳನ್ನು ನೋಡುತ್ತಿದ್ದ.

ಇದಾದ ಕೆಲ ತಿಂಗಳಿನ ನಂತರ , ಅಪ್ಪನಿಗೆ ಹುಷಾರಿರಲಿಲ್ಲ ಎಂದು ತಿಳಿದು ಊರಿಗೆ ದೌಡಾಯಿಸಿದ. ಏನೂ ಆಗಿಲ್ಲವೆಂದ ಅಪ್ಪ ,ಆ ರಾತ್ರಿ ಆರಾಮವಾಗಿ ಇರುವಂತೆ ಕಂಡರು. ಇದ್ದಕಿದ್ದಂತೆ ಆ ರಾತ್ರಿ ಅವರಿಗೆ ಜ್ವರ ತೀವ್ರವಾಯಿತು. ಅಮ್ಮ ಕಿರಿಚಿಕೊಂಡಾಗಲೇ ತಿಳಿದಿದ್ದು. ಓಡಿ ಬಂದು ನೋಡಿದರೆ ಅಪ್ಪ ಪ್ರಜ್ಞಾಹೀನರಾಗಿದ್ದರು. ಅವರನ್ನು ಎತ್ತಿಕೊಂಡ ಮನೋಹರ ತನ್ನ ಕಾರಿನಲ್ಲಿ ಹಾಕಿಕೊಂಡು ಹತ್ತಿರದ ಆಸ್ಪತ್ರೆಯೊಂದಕ್ಕೆ ದೌಡಾಯಿಸಿದ. ಜ್ವರಕ್ಕೆ ಇಂಜೆಕ್ಷನ್ ಒಂದನ್ನು ಚುಚ್ಚಿದ ವೈದ್ಯರು, ಬೆಂಗಳೂರಿಗೆ ಕರೆದುಕೊಂಡು ಹೋಗುವುದು ಸೂಕ್ತ ಎಂದರು. ತಕ್ಷಣವೇ ತಂದೆಯನ್ನು ಎತ್ತಿಕೊಂಡ ಮನೋಹರ ಕಾರಿನಲ್ಲಿ ಮಲಗಿಸಿ, ಅಮ್ಮನನ್ನು ಕೂರಿಸಿಕೊಂಡು ಬೆಂಗಳೂರಿಗೆ ಹೊರಟ. ಸುಮಾರು ಎರಡು ಗಂಟೆ ಪ್ರಯಾಣದ ನಂತರ ತನಗೆ ಗೊತ್ತಿರುವ ಆಸ್ಪತ್ರೆಯ ಹತ್ತಿರ ಕಾರನ್ನು ನಿಲ್ಲಿಸಿದ. ತನ್ನ ವೈದ್ಯ ಸ್ನೇಹಿತನಿಗೆ ಫೋನ್ ಮಾಡಿ ಕರೆಸಿಕೊಂಡ. ವೈದ್ಯರು ಚಿಕಿತ್ಸೆ ಪ್ರಾರಂಭಿಸಿದರು. ತುಂಬಾ ಹೊತ್ತಿನ ನಂತರ, ಅಪ್ಪ ಆರಾಮಾಗಿ ಮಲಗಿದರು ಅನಿಸಿತ್ತು ಬೆಳಿಗ್ಗೆ ಸುಮಾರು ಹತ್ತರ ಸಮಯದಲ್ಲಿ ಎಚ್ಚರಗೊಂಡ ಅಪ್ಪ, ಮನೋಹರನನ್ನು ಹತ್ತಿರ ಕರೆದು ಮೈ ತಡವಿದರು. ಮೈಯಲ್ಲಾ ತಡಕಾಡಿ "ಜನಿವಾರ" ಎಂದರು. ಅದೇ ಅವರಾಡಿದ ಕೊನೆಯ ಮಾತಾಯಿತು. ಯಾರಿಗೂ ತಿಳಿಸಿದೇ ಊರಿಗೆ ಬಂದ ಮನೋಹರ ಅಂತ್ಯಕ್ರಿಯೆಗಳನ್ನು ಮುಗಿಸಿ ಊರಲ್ಲೇ ಉಳಿದ. ಅಪ್ಪ ಜನಿವಾರಕ್ಕೆ ಅಂತಹ ಮಹತ್ವ ಏಕೆ ಕೊಟ್ಟರು ಎಂದುಕೊಂಡ. ಒಂದು ದಿನ ಮನೆಯಲ್ಲಿ ಹೀಗೆ ಕುಳಿತು ಅಪ್ಪನ ಪುಸ್ತಕಗಳು, ಲೆಕ್ಕ ಪತ್ರಗಳನ್ನೂ ನೋಡುತ್ತಾ ಕುಳಿತ ಮನೋಹರನಿಗೆ ಅಪ್ಪನ ಕೈಯಲ್ಲಿ ಬರೆದ ಬರಹವೊಂದು ಕಾಣಿಸಿತು. ಅದರಲ್ಲಿ " ಜನಿವಾರವೆಂದರೆ ಜಾತಿ ಸೂಚಕವಲ್ಲ, ಜಾತಿಯೊಂದನ್ನು ತೋರಿಸಿಕೊಳ್ಳುವುದ್ದಕ್ಕಾಗಿಯೂ ಅಲ್ಲ, ಜಾತಿ ಮೋಹಕವೂ ಅಲ್ಲ. ಅದೊಂದು ಗರ್ವ ಪಡುವ ವಿಷಯವೂ ಅಲ್ಲ. ಇಂದಿನ ಆಧುನಿಕ ದಿನಗಳ ಅಗತ್ಯ. ಮನಸಲ್ಲಿ ಕೆಟ್ಟ ಆಲೋಚನೆಗಳು ಮೂಡಿದರೂ ಅವನ್ನು ಕಾರ್ಯರೂಪಕ್ಕೆ ತರಲು ಜನಿವಾರ ಅವಕಾಶ ನೀಡುವುದಿಲ್ಲ, ಅದು ಮನಸ್ಸನ್ನು ಎಚ್ಚರಿಸುತ್ತದೆ. ಅದನ್ನು ಮುಟ್ಟಿ ಬಂದ ಆಲೋಚನೆಗಳನ್ನು ದೂರ ತಳ್ಳಬಹದು. ಎಲ್ಲ ಜಾತಿಯವರಿಗೂ ಉಪನಯನ ಮಾಡಬೇಕು, ಜನಿವಾರ ಹಾಕಬೇಕು. ಜನಿವಾರ ಎಲ್ಲರನ್ನೂ ಕಾಯುವ ಬೇಲಿ, ಅದನ್ನು ಜಾತಿಗಳಿಗೆ ಸುತ್ತಿಹಾಕಿದ್ದು ದುರದೃಷ್ಟಕರ. ಯಾರ ಮನಸಿನಲ್ಲಿ ಕೆಟ್ಟ ಯೋಚನೆ ಮೂಡಿದರೂ ಒಂದು ನಿಮಿಷ ಜನಿವಾರ ಮುಟ್ಟಿ ಕುಳಿತಿಕೊಳ್ಳಲು ಹೇಳಬೇಕು" ಹೀಗೆ ಅನೇಕ ವಿಷಯಗಳನ್ನು ಹೇಳಲಾಗಿತ್ತು. ಓದಿ ಮುಗಿಸಿದ ಮನೋಹರನ ಕಣ್ಣುಗಳಿಂದ ಕಣ್ಣೀರು ಸುರಿಯಲಾರಂಬಿಸಿತು. ಅಪ್ಪನ ಮನಸ್ಸೇ ತಿಳಿಯಲಿಲ್ಲ ಎಂದು ಮತ್ತೆ ಮತ್ತೆ ರೋಧಿಸಿದ.

ತಿಥಿಯ ದಿವಸ ಪುರೋಹಿತರು ಮತ್ತೆ ಜನಿವಾರವನ್ನು ತೊಡಿಸಿದಾಗ ಧನ್ಯತೆಯ ಭಾವದಿಂದ ಹಾಕಿಸಿಕೊಂಡು ಅದನ್ನು ಕಣ್ಣಿಗೆ ಒತ್ತಿಕೊಂಡ. ಅಪ್ಪನೇ ಜೊತೆಯಲ್ಲಿದ್ದಂತೆ ಭಾಸವಾಯಿತು. ಏನೋ ನೆಮ್ಮದಿ, ಧೈರ್ಯ ಮೂಡಿತು.

ಅಮೆರಿಕೆಗೆ ಹಿಂತಿರುಗದೆ ಭಾರತದಲ್ಲೇ ಉಳಿಯುವ ನಿರ್ಧಾರಮಾಡಿದ . ಅಮ್ಮನನ್ನು ಕರೆದುಕೊಂಡು ಬೆಂಗಳೂರಿಗೆ ಬಂದ. ಅಮ್ಮ ಬಹುತೇಕ ಮೌನಿಯಾಗಿದ್ದರು. ಅಂತಹ ಒಳ್ಳೆಯ ಪತಿಯನ್ನು ಕಳೆದುಕೊಂಡಮೇಲೆ ಅವರು ಸಸರ್ವಸ್ವವನ್ನು ಕಳೆದುಕೊಂಡಂತಾಗಿದ್ದರು, ಎಲ್ಲದರ ಮೇಲೆ ಆಸಕ್ತಿ ಕಳೆದುಕೊಂಡಿದ್ದರು. ರಾಮಾಯಣ, ಇಲ್ಲ ಮಹಾಭಾರತದ ಪುಸ್ತಕ ಹಿಡಿದು ಕುಳಿತುಕೊಂಡಿರುತ್ತಿದ್ದರು.

ಮನೋಹರ ಮತ್ತೆ ತನ್ನ ಬರೆವಣಿಗೆ ಮುಂದುವರೆಸಿದ.

ಆ ಜಾತಿ ಈ ಜಾತಿ ಎನ್ನದೆ ಎಲ್ಲ ಜಾತಿಯವರ ಸಭೆ ಸಭಾರಂಭಗಳಿಗೆ ಹೋಗಲಾರಂಭಿಸಿದ. ಕೆಲವು ಕಡೆ ಮೇಲಿನ ಜಾತಿಯವರಿಂದಲೇ ಎಲ್ಲಾ ಅನ್ಯಾಯ ಆಗಿದ್ದು ಎಂದು ಹೇಳಿದರೂ ಶಾಂತವಾಗಿ ಕುಳಿತು ಕೇಳುತ್ತಿದ್ದ. ತನ್ನ ಸರದಿ ಬಂದಾಗ,

" ಮೇಲ್ಜಾತಿಯವರಿಂದ ಅನ್ಯಾಯ ಆಗಿದ್ದು ನಿಜ , ಆದರೆ ಅದನ್ನೇ ಇನ್ನು ಎಷ್ಟುದಿನ ಹೇಳುವುದು, ಎಂದೋ ಅನ್ಯಾಯ ಮಾಡಿದರು ಎಂದು ಈಗಿನವರಿಗೆ ತಿವಿಯುವುದು ಸರಿಯಾದ ಮಾರ್ಗವಲ್ಲ. ಈಗಿನ ಕಾಲಘಟ್ಟದಲ್ಲಿ ಎಲ್ಲರಿಗೂ ಸಮಾನವಕಾಶವಿದೆ, ಎಲ್ಲರಿಗೂ ಜ್ಞಾನಕ್ಕೆ ತೆರೆದುಕೊಳ್ಳುವ ಅವಕಾಶವಿದೆ. ಈಗ ಬೇಕಾಗಿರುವುದು ಪ್ರತಿಭೆಯಲ್ಲ, ಶಿಸ್ತು, ದಿನವೂ ತಪ್ಪದೆ ಸಾಧಿಸುವ ಛಲ, ಅನುವಂಶೀಯಕವಾಗಿ ಬರುವ ಜ್ಞಾನ, ಬುದ್ದಿ ಈಗ ಬೇಕಿಲ್ಲ" ಎಂದು ಹೇಳಿದ್ದ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಅಷ್ಟೊಂದು ತಿಳಿವಳಿಕೆ, ತಪ್ಪದೆ ಇವ ಮೇಲ್ಜಾತಿಯವನೇ ಇರಬೇಕು ಎಂದು ಅವರಿವರು ಆಡಿದ್ದು ಕಿವಿಗೆ ಬಿದ್ದು "ಥತ್ ಈ ಜನ" ಎಂದುಕೊಂಡ. ಕೆಲವರು ಪ್ರತ್ಯಕ್ಷ ಪರೋಕ್ಷವಾಗಿ ಜಾತಿಯನ್ನು ಕೇಳಿದ್ದರೂ ಯಾರಿಗೆ ಅದರ ಕುರಿತು ಒಂದು ಮಾತು ಆಡುತ್ತಿರಲಿಲ್ಲ. ಅವನ ಸಮಾಜವಾದಿ, ಸಮಾನತೆ, ಅಸಹಿಷ್ಣುತೆ, ಜಾತೀಯತೆ ವಿರೋಧಿ ಮಾತುಗಳನ್ನು ಕೇಳಿದವರು ಇವನು ಹಿಂದುಳಿದ ವರ್ಗಕ್ಕೆ ಸೇರಿದವನೇ ಇರಬೇಕು ಎಂದುಕೊಂಡರು. ಇವ ನಮ್ಮವ ಎಂದುಕೊಂಡು ಎಲ್ಲ ಕಡೆ ಬಾಷಣ ಮಾಡಲು, ವೇದಿಕೆ ಹಂಚಿಕೊಳ್ಳಲು ಅನುವುಮಾಡಿಕೊಟ್ಟರು.

ರಾಜ್ಯದ ಎಲ್ಲಕಡೆ ನಡೆಯುವ ಪ್ರತಿಭಟನೆಗಳಲ್ಲಿ ಮನೋಹರ ಭಾಗವಹಿಸುತ್ತಿದ್ದ. ಅದರಲ್ಲೂ ಹಿಂದುಳಿದ ವರ್ಗಗಳ, ದಲಿತರ ಪ್ರತಿಭಟನಾ ಸಭೆಗಳಲ್ಲಿ ಭಾಗವಹಿಸುವುದು ಹೆಚ್ಚಾಯಿತು. ಮೇಲ್ಜಾತಿಯ ಜನ ತಾರತಮ್ಯ ಮಾಡಿದ್ದಾರೆ, ಮಾಡುತ್ತಿದ್ದಾರೆ ಎಂದು ಪದೇ ಪದೇ ಭಾಷಣಕಾರರು ಹೇಳುತ್ತಿದ್ದರೆ ಮನೋಹರ ಕಸಿವಿಸಿಗೊಳ್ಳದೆ ಕೇಳುತ್ತಾ ಕುಳಿತಿರುತ್ತಿದ್ದ. ತನ್ನ ಭಾಷಣದಲ್ಲಿ ಮಾತ್ರ ಹಿಂದಿನದು ಬಿಟ್ಟು ಇಂದಿನ ಸಂಗತಿ ಮಾತನಾಡೋಣ, ಈಗಿನ ಸಮಸ್ಯೆಗಳೇ ಬೇರೆ, ಆಧುನಿಕ ಯುಗಕ್ಕೆ ಎಲ್ಲರೂ ಬಲಿಪಶುಗಳೇ ಎಂದು ಹೇಳುತ್ತಿದ್ದ.

ಹೀಗಿರಲು, ಒಂದು ದಿನ ಬೆಳಿಗ್ಗೆ ಸ್ನಾನ ಮಾಡಿ, ಟವೆಲ್ ಒಂದನ್ನು ಸುತ್ತಿಕೊಂಡು ಮನೆಯ ಹಾಲಿಗೆ ಬಂದಾಗ, ಅಲ್ಲಿ ಕುಳಿತಿದ್ದ ಸ್ನೇಹಿತರನ್ನು ನೋಡಿ ಖುಷಿಯಿಂದ ಮಾತನಾಡಿಸಲು ಹತ್ತಿರ ಬಂದ . ಅಲ್ಲಿ ಕುಳಿತಿದ್ದ ಮೂರು ಜನ ಸ್ನೇಹಿತರು ಬಾಯಿ ತೆರೆದು ಆಶ್ಚರ್ಯದಿಂದ ಮಾತನಾಡದೆ ಅವನನ್ನೇ ನೋಡಹತ್ತಿದರು. ಅವರ ನೋಟ ಅವನು ಧರಿಸಿದ್ದ ಜನಿವಾರದ ಮೇಲೆಯೇ ಇತ್ತು. ಮನೋಹರನ ಅಮ್ಮ "ನಿನ್ನನು ಕೇಳಿಕೊಂಡು ಬಂದರು ನಾನೇ ಒಳಗಡೆ ಕರೆದು ಕುಳಿತುಕೊಳ್ಳುವಂತೆ ಹೇಳಿದೆ" ಎಂದರು. ಮನೋಹರ ಯಾರನ್ನೂ ಮನೆಗೆ ಕರೆದೊಯ್ಯುತ್ತಿರಲಿಲ್ಲ. ಅವನ ಮೈ ಮೇಲಿನ ಜನಿವಾರ ನೋಡಿದ ಮೂವರು ಸ್ನೇಹಿತರು "ಇದು ಮೋಸ ಇದು ಮೋಸ" ಎಂದು ಹೇಳಿ ಅಲ್ಲಿಂದ ಕೋಪದಿಂದ ಹೊರಟುಹೋದರು. ಮನೋಹರ ನಿಧಾನವಾಗಿ ಎಲ್ಲಾ ಅರ್ಥವಾಗಿ ತಲೆಯ ಮೇಲೆ ಕೈಯಿಟ್ಟು ಕುಳಿತುಬಿಟ್ಟ.

ಅಲ್ಲಿಂದ ಶುರುವಾಯಿತು, ಮನೋಹರನ ಮೇಲೆ ಪುಂಖಾನು ಪುಂಖವಾಗಿ ಲೇಖನಗಳು ಎಲ್ಲ ಪತ್ರಿಕೆಗಳಲ್ಲಿ ಬರಲಾರಂಭಿಸಿದವು. ಮನೋಹರ ಒಬ್ಬ ಮೋಸಗಾರನಂತೆ, ತಾನು ಮೇಲ್ಜಾತಿ ಎನ್ನುವುದನ್ನು ಬಚ್ಚಿಟ್ಟು ನಮ್ಮಲ್ಲಿ ಸೇರಿಕೊಂಡು ನಿಧಾನವಾಗಿ ನಮ್ಮಲ್ಲಿ ಒಡಕು ಮೂಡಿಸಿ, ನಮ್ಮ ಆಶಯವನ್ನು ದುರ್ಬಲಗೊಳಿಸಿ, ಮತ್ತೆ ಮೇಲ್ಜಾತಿಯನ್ನು ಬಲಾಢ್ಯ ಮಾಡುವ ಸಂಚು. ತಾನು ಮೇಲು ಜಾತಿಗೆ ಸೇರಿದ್ದರೂ ನಮ್ಮವನೇ ಎಂದು ನಂಬಿಸಿ ನಮ್ಮ ನಡುವೆ ತನ್ನ ಬೇಳೆ ಬೇಯಿಸಿಕೊಳ್ಳಲು, ತಾನು ಪ್ರಸಿದ್ದಿ ಹೊಂದಲು ಮಾಡಿದ ಹುನ್ನಾರ. ಇಂತಹ ಮೋಸಗಾರನನ್ನು ಹತ್ತಿರಕ್ಕೆ ಸೇರಿಸಿಕೊಳ್ಳಬಾರದು, ಇವನು ಗೋ-ಮುಖ ವ್ಯಾಘ್ರ, ಯಾವ ಪತ್ರಿಕೆಯೂ ಇವನ ಲೇಖನ, ಕಥೆ, ಕಾವ್ಯಗಳನ್ನು ಪ್ರಕಟಿಸಬಾರದು, ಇವನೊಬ್ಬ ಸಾಂಸ್ಕೃತಿಕ ಲೋಕಕ್ಕೆ ಕಪ್ಪು ಚುಕ್ಕೆ ಎಂದು ಹೀಗಳೆದರು.

ಜನಪ್ರಿಯ ಶಿಖರದ ತುತ್ತ ತುದಿಗೆ ಏರಲು ಕೆಲವೇ ಅಡಿಗಳಿದ್ದಾಗ, ಅಲ್ಲಿಂದ ಉರುಳಿ ಬಿದ್ದಂತಾಯಿತು ಮನೋಹರನಿಗೆ. ಯಾರೂ ಸಹಾಯಕ್ಕೆ ಬರಲಿಲ್ಲ. ತನ್ನಿಂದ ಪುಸ್ತಕ ಪ್ರಕಟಣೆಗೆ, ಸಮಾರಂಭಕ್ಕೆ, ಪ್ರಯಾಣಕ್ಕೆ, ವಸತಿ, ಊಟಕ್ಕೆ ಹೀಗೆ ಎಲ್ಲಕಡೆ ಹಣ ಸಹಾಯ ಪಡೆದುಕೊಂಡು ಸ್ನೇಹಿತರಾಗಿದ್ದ, ಚರ್ಚೆ ಮಾಡುತ್ತಿದ್ದ ಎಲ್ಲರೂ ದೂರ ಹೋಗಿಬಿಟ್ಟರು. ಅರೆ ಒಂದು ಜನಿವಾರದಿಂದ ನಾನು ಬದಲಾಗಿಬಿಟ್ಟೆನೇ, ಅದು ಅಪ್ಪನ ನೆನಪಿಗಾಗಿ ಇರುವುದಲ್ಲವೇ, ನನ್ನ ಆಲೋಚನೆಗಳು ಹಾಗೆ ಇವೆ ಅಲ್ಲವೇ. ನಾನು ಯಾವತ್ತಾದರೂ ಎಲ್ಲಿಯಾದರೂ, ಯಾರಿಗಾದರೂ ತಾರತಮ್ಯ ಮಾಡಿದ್ದೇನೆಯೇ? ಎಷ್ಟೋ ಸಲ ಒಂದೇ ತಟ್ಟೆಯಲ್ಲಿ ನಾವೆಲ್ಲಾ ಕುಳಿತು ಊಟ ಮಾಡಲಿಲ್ಲವೇ, ಎಲ್ಲರ ಮನೆಗೂ ಹೋಗಿ ಜೊತೆಯಲ್ಲಿ ಇರುತ್ತಿದ್ದೆನಲ್ಲವೇ, ನನ್ನ ಮನಸಿನಲ್ಲಿ ಬಾರದಿದ್ದ ವಿಷಯಗಳಿಗೆ ಹೀಗೆ ಬಣ್ಣ ಕಟ್ಟುವುದು ತಪ್ಪಲ್ಲವೇ? ತನ್ನ ಮಾತಿನಿಂದ ಹಿಂದುಳಿದ, ದಲಿತ ಸ್ನೇಹಿತರ ಜೊತೆಯಿಂದ ಮೇಲುಜಾತಿಯ ಯಾರೂ ತನ್ನನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಮನೋಹರನ ಸಹಾಯಕ್ಕೆ ಯಾರೂ ಬರಲಿಲ್ಲ. ಅಸಹಾಯಕತೆಯಿಂದ ನರಳಿಬಿಟ್ಟ.

ಬರವಣಿಗೆ ಉಸಿರು, ಜನರ ನಡುವೆ ಒಳ್ಳೆಯದನ್ನು ಮಾತನಾಡುವುದು ಒಂದು ಸಾಮಾಜಿಕ ಜವಾಬ್ದಾರಿ ಎಂದು ತಿಳಿದ್ದಿದ ಮನೋಹರನಿಗೆ ಎಲ್ಲವೂ ಗೊಂದಲದಂತೆ ಕಂಡಿತು. ಎಲ್ಲರಿಗೂ ಬೇಕಾಗಿರುವುದು ಸಮಾಜದ ಉದ್ಧಾರವಲ್ಲ, ತಮ್ಮದೇ ಜನಪ್ರಿಯತೆ. ಸಾಹಿತಿಗಳೂ, ಸಿನೆಮಾದವರಂತೆ ತಮ್ಮ ಗುಂಪು ಕಟ್ಟಿಕೊಂಡು ತಮ್ಮ ತಮ್ಮವರನ್ನೇ ಮೇಲಕ್ಕೆ ತರಲು ಹವಣಿಸುವುದು ಈಗ ನಿಚ್ಚಳವಾಗಿ ಕಾಣತೊಡಗಿತು. ಎಷ್ಟೇ ಅದ್ಭುತ, ಗಂಭೀರವಾಗಿ ಬರೆದರೂ ಕೆಲ ಲೇಖಕರ ಬರಹಗಳು ಪತ್ರಿಕೆಗಳಲ್ಲಿ ಪ್ರಕಟವಾಗದಿರುವುದೂ, ಕಥೆ, ಕಾವ್ಯ, ಕಾದಂಬರಿ ಎಷ್ಟೇ ಅದ್ಭುತವಾಗಿದ್ದರೂ ಪ್ರಶಸ್ತಿ ಬಾರದಿರುವುದೂ ಯಾಕೆ ಎನ್ನುವುದು ಅರಿವಿಗೆ ಬಂತು.

ತಾನು ತನ್ನ ಕೆಲಸ ಅಷ್ಟೇ ಎಂಬಂತಾಯಿತು ಮನೋಹರನಿಗೆ. ಕೆಲಸ ಬಿಟ್ಟು ಎಲ್ಲಾದರೂ ದೂರ ಹೋಗೋಣಲವೇ ಅನಿಸಿದ್ದು ಉಂಟು, ಆದರೆ ಕೆಲಸ ಬಿಟ್ಟು ಜೀವನ ನಡೆಸುವ ಕಲೆ ಅವನಿಗೆ ಗೊತ್ತಿರಲಿಲ್ಲ. ಅಪ್ಪ ಯಾವ ಆಸ್ತಿಯನ್ನು ಬಿಟ್ಟು ಹೋಗಿರಲಿಲ್ಲ. ಊರಿನ ಮನೆ ಯಾವಾಗಲೋ ಬಿದ್ದುಹೋಗಿತ್ತು. ಅಮ್ಮನನ್ನು ನೋಡಿಕೊಳ್ಳಬೇಕಾದರೆ ಕೆಲಸ ಮಾಡುವುದು ಅನಿವಾರ್ಯವಾಗಿತ್ತು.

ಕ್ರಮೇಣ ಮಗನ ಅವಸ್ಥೆ ಕಂಡು, ಅಮ್ಮ ಮಮ್ಮುಲ ಮರುಗಿದರು. ಆದರೆ ಏನು ಹೇಳಲೂ ತೋಚಲಿಲ್ಲ. ಮಗ ಬುದ್ಧಿವಂತ ಅವನೇ ನಿಭಾಯಿಸುತ್ತಾನೆ ಎಂದುಕೊಂಡರು.

ಪತ್ರಿಕೆಗಳಿಗೆ ಬರೆಯುವುದು ನಿಲ್ಲಿಸಿ, ಫೇಸ್ ಬುಕ್ಕಿನಲ್ಲಿ ತನ್ನ ಅನಿಸಿಕೆಗಳನ್ನು ಬರೆಯತೊಡಗಿದ. ಅಲ್ಲಿ ಐವತ್ತು ಜನರ ಹೊಗಳಿಕೆ, ಐವತ್ತು ಜನರ ತೆಗಳಿಕೆ ಕಂಡು ಅಲ್ಲಿ ಬರೆಯುವುದನ್ನೂ ನಿಲ್ಲಿಸಿಬಿಟ್ಟ.

ಯಾರು ಏನಾದರೂ ಮಾಡಿಕೊಳ್ಳಲಿ, ತಾನಾಯಿತು ತನ್ನ ಕೆಲಸವಾಯಿತು ಎನ್ನುವುದು ಇಂದಿನ ಜನರ ಧ್ಯೇಯವಾಗಿದೆ. ಯಾರ ಉದ್ಧಾರಮಾಡಿ ಏನು ಮಾಡಬೇಕಾಕಿದೆ ಎನ್ನುವ ಕಾಲ. ತಮಗೇನು ಸಿಗುವುದು ಎನ್ನುವ ಕಾಲ ಎಂದುಕೊಂಡು, ಮನೆಯಲ್ಲಿ ಕುಳಿತು ತನಗೆ ತೋಚಿದ್ದು ಬರೆಯತೊಡಗಿದ. ಎಲ್ಲೂ ಪ್ರಕಟಿಸಲು ಹೋಗಲಿಲ್ಲ. ಹುಚ್ಚನಂತೆ ಬರೆಯುತ್ತಲೇ ಹೋದ. ಅದು ಸಾವಿರಾರು ಪುಟಗಳಾದವು. ಬರಹಗಾರ ಸತ್ತಮೇಲೆ ಮಾತ್ರ ಹೆಚ್ಚು ಬೆಳಕಿಗೆ ಬರುವುದು, ನಾನು ಸತ್ತಮೇಲಾದರೂ ನಾನು ಏನೆಂದು ಜನಕ್ಕೆ ತಿಳಿಯಲಿ ಎಂದುಕೊಂಡ.

ಸುಮ್ಮನೆ ಕುಳಿತೂ ಕುಳಿತೂ ಸಾಕಾಯಿತು. ಅಮೆರಿಕೆಯಲ್ಲಿ ಇದ್ದಾಗ ಜನ ಇಂತಹ ಸಮಯದಲ್ಲಿ ಸಿಗರೇಟ್, ಮದ್ಯಪಾನ ಎಂದು ಮನ ಹೊರಳಿಸುವುದನ್ನು ಕಂಡಿದ್ದ. ಎಲ್ಲ ಮರೆಯಬೇಕೆಂದರೆ ತಾನೂ ಅದೇ ದಾರಿ ಹಿಡಿಯಬೇಕು ಎನಿಸಿತು. ಯಾವುದೋ ನಶೆಯಲ್ಲಿ ಇದ್ದರೆ ಎಲ್ಲ ಮರೆಯಬಹದು ಎಂದುಕೊಂಡ. ಪ್ರೇಮದಲ್ಲಾದರೂ ಬೀಳಬಹುದಿತ್ತು, ಪ್ರೇಮಕೂಡ ನಶೆಯೇ. ಯಾಕೋ ಯಾವ ಹುಡುಗಿಯೂ ಇಷ್ಟವಾಗಿರಲಿಲ್ಲ. ಅದರಲ್ಲೂ ಬಂಧನದಲ್ಲಿ ಸಿಕ್ಕಿಹಾಕಿಕೊಂಡರೆ ತನ್ನ ಬರೆವಣಿಗೆಗೆ, ಹೋರಾಟಕ್ಕೆ ಅಡ್ಡಿಯಾಗಬಹದೆಂಬ ಭಯ ಬೇರೆ ಇತ್ತು. ತಾನು ಒಂಟಿಯಾಗೇ ಇರಬೇಕು, ಏನಾದರೂ ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕು ಎಂದು ಕೊಂಡಿದ್ದ. ಆದರೆ ಈಗ ಅರಿವಿಗೆ ಬರತೊಡಗಿತ್ತು, ಸಮಾಜದ ಯಾರಿಗೂ ಯಾರ ಸಹಾಯವೂ ಬೇಕಿಲ್ಲವೇನೂ ಎನಿಸಿತು, ಸಹಾಯ ಮಾಡಿದರೂ ಸಂದೇಹ ಪಡುತ್ತಿದ್ದರು. ಎಂತಹ ಕೆಲಸದಲ್ಲೂ ಕೆಲಜನ ತಪ್ಪು ಹುಡುಕುತ್ತಿದ್ದರು. ಸಮಾಜ ಸುಧಾರಕರ ಕಾಲ ಮುಗಿಯಿತು ಅನಿಸಿತು.

ಎಲ್ಲದರಿಂದಲೂ ತಪ್ಪಿಸಿಕೊಳ್ಳಬೇಕಾದರೆ ನಶೆಯಲ್ಲಿರಬೇಕು ಎನಿಸಿತು. ಆಗ ಸಾಯಂಕಾಲ ಏಳುಗಂಟೆ ಆಗಿತ್ತು. ಅಚಾನಕ್ ಎದ್ದು ಹತ್ತಿರದಲ್ಲಿದ್ದ ಬಾರ್ ಒಂದರಲ್ಲಿ ಹೋಗಿ ಕುಳಿತ. ಎಂದೂ ಕುಡಿದಿರಲಿಲ್ಲ. ಜನಿವಾರ ತೆಗೆದು ಜೇಬಿನಲ್ಲಿ ಇಟ್ಟುಕೊಂಡ. ಸಿಗರೇಟ್ ಬೇಕೆಂದು ಕೇಳಿದ. ಬಿಯರ್ ಒಂದರ ಹೆಸರು ಗೊತ್ತಿತ್ತು ಕೇಳಿದ. ಸಿಗರೇಟ್ ಹಚ್ಚಿ ಒಂದು ದಮ್ ಎಳೆದು, ಒಂದು ಗುಟುಕು ಬಿಯರ್ ಕುಡಿದ. ಕೆಮ್ಮು ಆವರಿಸಿತು, ಸುಧಾರಿಸಿಕೊಂಡ. ಆಗ ಅವನ ಫೋನ್ ಹೊಡೆದುಕೊಳ್ಳಲಾರಂಭಿಸಿತು. ಪಕ್ಕದ ಮನೆಯವರು, "ಬೇಗ ಬನ್ನಿ ನಿಮ್ಮ ತಾಯಿ ಬಿದ್ದುಹೋಗಿದ್ದಾರೆ" ಎಂದು ಗಾಭರಿಯಿಂದ ಕಿರುಚಿದರು. ಮನೆಗೆ ಓಡಿ ಬರುವ ವೇಳೆಗೆ ತಾಯಿ ತೀರಿಕೊಂಡಿದ್ದರು. ದುಃಖ ತಡೆದುಕೊಳ್ಳಲಾರದೆ ಜೋರಾಗಿ ಅತ್ತು ಬಿಟ್ಟ. ಕ್ಷಮಿಸಿ ಅಮ್ಮ ಕ್ಷಮಿಸಿ ಅಪ್ಪ ಎಂದು ಅವನು ಪದೇ ಪದೇ ಹೇಳುತ್ತಿದ್ದಾಗ ಜನರಿಗೆ ಆಶ್ಚರ್ಯವಾಯಿತು. ಎಲ್ಲವೂ ಮುಗಿದಮೇಲೆ ಅವನಿಗೆ ಅನಿಸಿತು, ತಾನು ಜನಿವಾರ ತೆಗೆದಿದ್ದೂ, ಸಿಗರೇಟ್ ಬಿಯರ್ ಹಿಡಿದಿದ್ದು, ತಾಯಿ ಅದೇ ಸಮಯದಲ್ಲಿ ತೀರಿಕೊಂಡಿದ್ದು ಕಾಕತಾಳೀಯವೇ ಅಥವಾ ಯಾವುದಾದರೂ ಕಾರ್ಯಕಾರಣ ಸಂಬಂಧವಿದೆಯೇ ಎಂದು. ಯಾವ ಶಕ್ತಿ ತನ್ನ ಜನಿವಾರ ತೆಗೆದು ತಪ್ಪುಮಾಡುವಂತೆ ಪ್ರೇರೇರಿಪಿಸಿತ್ತು. ಅಪ್ಪನ ನಂಬಿಕೆಗೆ ಹೇಗೆ ಕುಂದು ಬಂದಿತು. ಅಪ್ಪ ಮತ್ತೆ ಇನ್ನೊಮ್ಮೆ ತೀರಿಕೊಂಡಿರುತ್ತಾರೆ, ಇಲ್ಲ, ಅಪ್ಪನ ತಪ್ಪಲ್ಲ, ಜೀವನದಲ್ಲಿ ನಡೆಯುವ ಪ್ರತಿಯೊಂದನ್ನು ತುಂಬಾ ಗಂಭೀರವಾಗಿ, ತೀರಾ ವೈಯಕ್ತಿಕವಾಗಿ ತೆಗೆದುಕೊಂಡರೆ ಹೀಗೆ ಆಗುವುದು, ಎಂದುಕೊಂಡ. ತಾಯಿ ತೀರಿಕೊಂಡರೂ ಯಾವ ಸ್ನೇಹಿತರೂ ಬರಲಿಲ್ಲವಾದ್ದರಿಂದ ಇನ್ನೂ ವಿಚಲಿತನಾದ. ನಾನು ಯಾರು ಹೇಗೆ ಎಂದು ಅರ್ಥಮಾಡಿಕೊಳ್ಳದ ಜನ ಬಂದರೂ ಬಂದಿಲ್ಲದಿದ್ದರೂ ಏನೂ ವ್ಯತ್ಯಾಸ ಆಗದು ಎಂದುಕೊಂಡ.

ಅವನ ಹೃದಯದಲ್ಲಿ ಒಂದು ಭಾರವಾದ ಭಾವನೆ ತುಂಬಿಕೊಂಡಿತ್ತು. ಆ ರಾತ್ರಿಯ ತಂಪಾದ ಗಾಳಿಯಲ್ಲೂ ಅವನಿಗೆ ಉಸಿರಾಟ ಕಷ್ಟವಾಗುತ್ತಿತ್ತು. ತಾನು ಮಾಡಿದ ತಪ್ಪು, ಒಂದು ಸಣ್ಣ ಕ್ಷಣದ ತೀರ್ಮಾನ, ಈಗ ಅವನ ಒಳಗಿನ ಶಾಂತಿಯನ್ನು ಕಸಿದುಕೊಂಡಿತ್ತು. "ನಾನೇಕೆ ಅಂತಹ ನಿರ್ಧಾರ ತೆಗೆದುಕೊಂಡೆ?" ಎಂದು ಅವನ ಮನಸ್ಸು ಪದೇ ಪದೇ ಕೇಳುತ್ತಿತ್ತು. ಆದರೆ ಉತ್ತರವಿಲ್ಲದೆ, ಆತನ ಒಳಗಿನ ದನಿಯೇ ಅವನನ್ನು ಶಿಕ್ಷಿಸುತ್ತಿತ್ತು. ಅವನ ಕಣ್ಣುಗಳಲ್ಲಿ ತಪ್ಪಿತಸ್ಥ ಭಾವನೆಯ ಛಾಯೆಯಿತ್ತು. ತಾನು ಮಾಡಿದ ತಪ್ಪಿನಿಂದ ಆಗಿರುವ ನೋವು, ಈಗ ಅವನನ್ನೇ ಕಾಡುತ್ತಿತ್ತು. ರಾತ್ರಿಯ ತಿಳಿಬೆಳಕಿನಲ್ಲಿ, ಅವನ ಬೆವರಿಳಿಯುವ ಕೈಗಳು ಕಂಪಿಸುತ್ತಿದ್ದವು.

ಇದೆಕ್ಕೆಲ್ಲಾ ತಾನು ಸಮಾಜಕ್ಕೆ ಏನಾದರೂ ಮಾಡಬೇಕೆಂಬ ತಪನೆಯಿಂದ, ಮಾತನಾಡಿದ್ದು, ಬರೆದಿದ್ದು, ಆದರೆ ಅದೇ ಇಷ್ಟು ನೋವು ಕೊಡಬಹುದೇ. ತಾಯಿಯನ್ನು ಕಳೆದುಕೊಂಡಿದ್ದು ಸರ್ವಸ್ವವನ್ನು ಕಳೆದುಕೊಂಡಾಗಿತ್ತು. ಇನ್ನು ಈ ಜನರೂ ಬೇಡ, ಬರಹವೂ ಬೇಡ ಎನಿಸಿತು. ಈ ದೇಶ, ರಾಜ್ಯ, ಜನರನ್ನು ಅಷ್ಟು ಪ್ರೀತಿಸಿದರೂ ನೋವೇ ಕೊಟ್ಟೀತೇ, ಬಹುಶಃ ಪ್ರೀತಿಯೇ ಅಷ್ಟು. ಏನೇ ಇರಲಿ ಇನ್ನು ಯಾರಿಗೂ ನನ್ನ ಅಗತ್ಯವಿಲ್ಲ ಅನಿಸಿ ಒಂದು ತೀರ್ಮಾನಕ್ಕೆ ಬಂದ. ಯಾವುದೋ ಕಾರಣಕ್ಕೆ ಸಾಮಾಜಿಕ ಜವಾಬ್ದಾರಿಯಿಂದ ನುಣಿಚಿಕೊಳ್ಳಬಹುದೇ ಎನ್ನುವ ದ್ವಂದ್ವ ಕೂಡ ಕಾಡಿತು. ಆದರೆ ಮನಸ್ಸು ಕಲ್ಲಾಗಿತ್ತು.

ಹೀಗೆ ಆರುತಿಂಗಳಾಯಿತು. ಜನರು ಭಾಷಣ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಕಡಿಮೆಯಾಯಿತು. ಹೊಸತನವೇ ಇಲ್ಲ ಎಂದುಕೊಂಡರು. ಜನರ ಎದೆಯಾಳದಲ್ಲಿ ಕಿಚ್ಚು ಹಚ್ಚಬೇಕಾದರೆ ಮನೋಹರನ ಭಾಷಣ ಬರಹ ಇರಬೇಕೆಂದು ಎಲ್ಲ ಹೋರಾಟಗಾರರಿಗೆ ಅನಿಸತೊಡಗಿತು. ಬೇಸರಗೊಂಡಿರುವ ಮನೋಹರನನ್ನು ಓಲೈಸುವವರು, ಒಲಿಸುವವರು ಯಾರು ಎಂದುಕೊಂಡರು. ಎಲ್ಲರೂ ಹೋಗಿ ಕ್ಷಮಾಪಣೆ ಕೇಳುವುದಷ್ಟೇ ಎಂದುಕೊಂಡು, ಮನೋಹರನ ಮನೆಗೆ ಹೋದರು. ಅಲ್ಲಿ ಮನೆಗೆ ಬೀಗ ಹಾಕಲಾಗಿತ್ತು, ಪಕ್ಕದ ಮನೆಯವರು ಅವರು ದೇಶಬಿಟ್ಟು ಹೊರಟುಹೋದರು ಎಂದರು. ಕಿಟಕಿಯಿಂದ ನೋಡಿದರೆ ಬರಹಗಳ ರಾಶಿ ಮನೆಯಲ್ಲಿ ಬಿದ್ದಿರುವುದು ಕಂಡು ಬಂತು.

ಉಪವೀತಂ ಭಿನ್ನತಂತುಂ ಜೀರ್ಣಂ ಕಶ್ಮಲದೂಷಿತಮ್ |
ವಿಸೃಜಾಮಿ ಜಲೇ ಬ್ರಹ್ಮನ್, ವರ್ಚೋ ದೀರ್ಘಾಯುರಸ್ತುಮೇ ||

(ಸಡಿಲವಾದ ದಾರವನ್ನು, ಹಳೆಯದಾದ ಮತ್ತು ಕಲ್ಮಶದಿಂದ ಕೂಡಿದ ಜನಿವಾರವನ್ನು ನೀರಿನಲ್ಲಿ ಬಿಡುತ್ತೇನೆ. (ಇದರಿಂದ) ನನಗೆ ಬ್ರಹ್ಮತೇಜಸ್ಸು ಮತ್ತು ದೀರ್ಘಾಯುಷ್ಯವು ದೊರೆಯಲಿ).

ಕವನ ಸಂಕಲನ





ಎಂ.ವಿ. ಶಶಿಭೂಷಣ ರಾಜು

ಬದಲಾಗುವ ಕಾಲ

ಕಾಲ ಎಲ್ಲ ಕಾಲಗಳಲ್ಲಿ ಒಂದು ಅವಕಾಶ ನೀಡುತ್ತಿತ್ತು ಬದಲಾಗಲು
ಕಣ್ಣರೆಪ್ಪೆಯೊಳಗಿನ ಭ್ರಮೆಗಳ ನಡುವೆ ಕಳೆದುಹೋಗುತ್ತಿದ್ದವು ಜನಾಂಗಗಳು
ಯಾವುದಕ್ಕೋ, ಯಾರಿಗೋ ಅಭಿಮಾನದ ಕಾಲಡಿಯಲ್ಲಿ ನಲುಗಲು ರೂಢಿಮಾಡಿಕೊಂಡ ಮನಸುಗಳು
ಬದಲಾವಣೆ ಕಂಡರೆ ಭಯ ಕಂಗಳಲಿ ಇಣುಕುತ್ತದೆ

ಪ್ರಶ್ನೆಮಾಡದ ಬದುಕಿಗೆ ದಾಸಾನುದಾಸರಾದ ಮೇಲೆ, ಅದೊಂದು ಕಂಫರ್ಟ್ ಜೋನ್
ತಲೆ ಎತ್ತಿ ಎತ್ತ ನೋಡಿದರೂ, ತಲೆಗೆ ಮೊಟಕುವ ಒಂದು ಕೈ ಇದ್ದೇ ಇರುತ್ತದೆ
ನೋವನ್ನು ಸಹಿಸಿಕೊಂಡೇ ಬೆಳಕಿಗೆ ತೆರೆದುಕೊಳ್ಳಬೇಕು
ಜ್ಞಾನೋದಯವಾದಮೇಲೆ ಬೆಳೆಕು ಉರಿಯುತ್ತಲೇ ಇರುತ್ತದೆ

ಈಗಲ್ಲದೆ ಇನ್ನೆಂದು ಬದಲಾಗುವುದು, ಜಾತಿ, ಧರ್ಮಗಳ ಅಡಿಪಾಯದಲ್ಲಿ
ಹಣ, ಅಂತಸ್ತುಗಳ ಅಧಿಕಾರದಡಿಯಲ್ಲಿ, ದೇವರು ದೆವ್ವಗಳ ಗೊಂದಲದಲ್ಲಿ, ಅಭಿಮಾನದ ಅಪಾಯದಲ್ಲಿ
ಗುರಿಗೆ ಅಡ್ಡಮಾಡಿಕೊಂಡು ನಲುಗುವುದ ಬಿಟ್ಟು ಹೊರಬರುವಕಾಲ
ರಾಜಕೀಯ ಜನಗಳ ಕಾಲಡಿಯಿಂದ ಸ್ವತಂತ್ರವಾಗುವ ಕಾಲ

ಎಲ್ಲವೂ ಸ್ವಯಂಕೃತಾಪರಾಧ, ಯಾರ ಉದ್ಧಾರ ಯಾರಿಂದಲೂ ಸಾಧ್ಯವಿಲ್ಲ
ಯಾರೋ ಬಂದು ಕಾಪಾಡುವರು ಎನ್ನುವ ಕಾಲ ಹೋಗಾಯಿತು
ಬದಲಾಗಲೇ ಬೇಕು, ತನ್ನನ್ನು ತಾನು ಕಾಪಾಡಿಕೊಳ್ಳಲು
ತನ್ನ ದಾರಿ ತಾನೇ ಹುಡುಕಿಕೊಳ್ಳಬೇಕು

ಬದಲಾಗಲೇಬೇಕು, ಯಾರದೋ ಆಸೆಗೆ ಬಲಿಯಾಗದೆ
ತನ್ನ ಗುರಿಯೊಂದನು ಹುಡುಕಿಕೊಂಡು!
ಜೀವಿಸುವ ಸಮಯ ಬಲು ಕಡಿಮೆಯಾಗಿರುವಾಗ, ತನಗೆ ಬೇಕಾದುದನ್ನೇ
ಮಾಡುವುದಷ್ಟೇ ಮಾಡುವುದು



ಎಂ.ವಿ. ಶಶಿಭೂಷಣ ರಾಜು

ದೇವರು ನಗುವುದಿಲ್ಲ

ಅಲ್ಲೊಂದು ಕಲ್ಲು, ಅರಿಶಿನ ಕುಂಕುಮ, ಒಂದು ಹೂವು, ಒಂದು ದೀಪ; ಇಷ್ಟಾದರೆ ಸಾಕು ದೇವರಾಗಲು.

ಬಲು ಸುಲಭ ದೇವರ ಸೃಷ್ಟಿ, ಆದರೆ ಸೃಷ್ಟಿಯ ದೇವರ ಕಾಣುವ ಹಂಬಲ ಜನ್ಮಾತೀತ. ಗುಡಿ, ಚರ್ಚ್, ಮಸೀದಿಗಳ ಅಲೆದರೂ ಅರ್ಥವಾಗುವ ವಿಷಯವಲ್ಲ ಇದು.

ದೇವರಿಗೂ ಈಗ ಕೆಲಸ ಸುಲಭ; ಬ್ರಹ್ಮಾಂಡ ತನ್ನದೇ ನಿಯಮದಲಿ ಯಾರ ಹಂಗಿಲ್ಲದೆ ಅರಳುತ್ತಿಹುದು. ಸೃಷ್ಟಿಕರ್ತ ತುಸು ಕಣ್ಣು ಮುಚ್ಚಿದರೂ ಗ್ರಹಗತಿಗಳ ಪಥ ಬದಲಾಗದು.

ಯಾರನ್ನೇ ದೇವರ ಮಾಡಿದರೂ ದೇವರು ನಗುವುದಿಲ್ಲ. ಕಾಣದ ಕಣ್ಣುಗಳ ಸೃಷ್ಟಿಯಲಿ ಸುತ್ತ ಇರುವುದು ಸುಳ್ಳಲ್ಲ; ಆದರೆ ಕಾಣದ್ದನ್ನು ಎಲ್ಲಿಂದ ತಂದು ಪೂಜಿಸಿ ಸಾಬೀತುಪಡಿಸುವುದು?

ತನ್ನ ಅಸ್ತಿತ್ವ ಸಾಬೀತುಪಡಿಸುವುದು ದೇವರ ಕೆಲಸವಲ್ಲ, ಅನಿವಾರ್ಯವೂ ಅಲ್ಲ. ದೇವರಿರಲಿ, ಇಲ್ಲದಿರಲಿ– ಜಗತ್ತು ಸಾಗುತ್ತದೆ ತನ್ನ ಪಾಡಿಗೆ, ಯಾವುದೂ ಯಾವುದಕ್ಕೂ ಕಾರಣವಲ್ಲ.

ಮಾನವ ದೇವರಾಗುವುದೇ ಗುರಿ; ಕೆಟ್ಟವರು, ಒಳ್ಳೆಯವರು ಯಾರೂ ಆಗಬಹುದು, ಬದಲಾಗುವ ಛಲವೊಂದೇ ಅನಿವಾರ್ಯ. ಸೂರ್ಯರಶ್ಮಿ ತಾಗಲು ಮೋಡ ಸರಿದರೆ ಸಾಕು.

ದೇವರಿರಲಿ ತನ್ನಷ್ಟಕ್ಕೆ, ಪೀಡಿಸದೆ, ಕಾಡದೆ ದಾರಿ ಸಾಗಲಿ. ಹಾದಿಯ ಉರಿಬಿಸಿಲಿಗೆ ಎಲ್ಲಿಂದಲೋ ಬಂದು ತಣಿಸುವ ನೆರಳು ಮತ್ತೆ ಕಾಯುತ್ತಿದೆ ನಮಗಾಗಿ.

ಅಡಿಗೆ ಅರಮನೆ





ಅನುಪಮ ಕೆ ಏನ್
ನ್ಯೂ ಜೆರ್ಸಿ

ಉದ್ದಿನ ಕಡುಬು



ಬೇಕಾಗುವ ಸಾಮಗ್ರಿಗಳು

ಉದ್ದಿನ ಬೇಳೆ – 1 ಕಪ್
ಅಕ್ಕಿ ರವೆ – 1 ಕಪ್
ತೆಂಗಿನ ತುರಿ – 2 ಕಪ್
ನೆನೆಸಿದ ಕಡಲೆಬೇಳೆ – 1 ಟೇಬಲ್ ಚಮಚ
ಶುಂಠಿ – 2 ಇಂಚು
ಹಸಿಮೆಣಸಿನಕಾಯಿ – 5
ಕರಿಮೆಣಸು ಪುಡಿ – 1 ಟೀ ಚಮಚ
ಸೋಡಾ – 1 ಟೀ ಚಮಚ

ಮಾಡುವ ವಿಧಾನ

ಅಕ್ಕಿ ರವೆ ತಯಾರಿಸಲು, ಅಕ್ಕಿಯನ್ನು ಚೆನ್ನಾಗಿ ತೊಳೆದು ನೆರಳಿನಲ್ಲಿ ಒಣಗಿಸಿ. ನಂತರ ಮಿಕ್ಸಿಯಲ್ಲಿ ಸ್ವಲ್ಪ ರವೆಯಂತೆ ಪುಡಿ ಮಾಡಿಕೊಳ್ಳಿ.
ಉದ್ದಿನ ಬೇಳೆಯನ್ನು 3–4 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿಡಿ. ನೆನೆಸಿದ ಉದ್ದಿನ ಬೇಳೆಯನ್ನು ಸಾಧ್ಯವಾದಷ್ಟು ಕಡಿಮೆ ನೀರು ಬಳಸಿ ಮಿಕ್ಸಿಯಲ್ಲಿ ರುಬ್ಬಿಕೊಳ್ಳಿ.
ತಯಾರಿಸಿದ ಅಕ್ಕಿ ರವೆಯನ್ನು ಸ್ವಲ್ಪ ಹುರಿದುಕೊಳ್ಳಿ. ಅದು ತಣ್ಣಗಾದ ನಂತರ ಸ್ವಲ್ಪ ನೀರು ಸೇರಿಸಿ ಕೆಲವು ನಿಮಿಷಗಳ ಕಾಲ ನೆನೆಸಿಡಿ. ನಂತರ ಅಕ್ಕಿ ರವೆಯಲ್ಲಿರುವ ಹೆಚ್ಚು ನೀರನ್ನು ಸಂಪೂರ್ಣವಾಗಿ ತೆಗೆದುಹಾಕಿ.
ಮೊದಲು ಶುಂಠಿ, ಹಸಿಮೆಣಸಿನಕಾಯಿ ಮತ್ತು ಉಪ್ಪನ್ನು ಮಿಕ್ಸಿಯಲ್ಲಿ ರುಬ್ಬಿಕೊಳ್ಳಿ. ನಂತರ ತೆಂಗಿನ ತುರಿ ಸೇರಿಸಿ ಸ್ವಲ್ಪ ಒರಟಾಗಿ ರುಬ್ಬಿಕೊಳ್ಳಿ.
ಎಲ್ಲಾ ಸಾಮಗ್ರಿಗಳನ್ನು ಒಟ್ಟಿಗೆ ಸೇರಿಸಿ. ನೆನೆಸಿದ ಕಡಲೆಬೇಳೆ ಮತ್ತು ಸಣ್ಣದಾಗಿ ಕತ್ತರಿಸಿದ ಕೊತ್ತಂಬರಿ ಸೊಪ್ಪು ಸೇರಿಸಿ, ಇಡ್ಲಿ ಹಿಟ್ಟಿನ ಹದ ಬರುವಂತೆ ಅಗತ್ಯವಾದವಷ್ಟು ನೀರು ಸೇರಿಸಿ ಚೆನ್ನಾಗಿ ಕಲಸಿ.
ತಟ್ಟೆ ಅಥವಾ ಸಾಮಾನ್ಯ ಇಡ್ಲಿ ಸ್ಟಾಂಡ್ಗೆ ಸ್ವಲ್ಪ ಎಣ್ಣೆ ಹಚ್ಚಿ. ನಂತರ ಈ ಮಿಶ್ರಣವನ್ನು ಹಾಕಿ ಹಬೆಯಲ್ಲಿ ಬೇಯಿಸಿ ಉದ್ದಿನ ಕಡುಬು ತಯಾರಿಸಿಕೊಳ್ಳಿ.
ಚಟ್ನಿಯೊಂದಿಗೆ ಬಿಸಿ ಬಿಸಿ ಉದ್ದಿನ ಕಡುಬನ್ನು ಸವಿಯಿರಿ.



ಅನುಪಮ ಕೆ ಏನ್
ನ್ಯೂ ಜೆರ್ಸಿ

ಹಾಲು ಒಬ್ಬಟ್ಟು ಅಥವಾ ಪೂರಿ ಪಾಯಸ

ಹಪ್ಪಳಕ್ಕೆ ಬೇಕಾಗುವ ಪದಾರ್ಥಗಳು

ಚಿರೋಟಿ ರವೆ – ½ ಕಪ್
ಮೈದಾ – ½ ಕಪ್
ತುಪ್ಪ – 2 ಟೀ ಸ್ಪೂನ್
ಉಪ್ಪು – ½ ಟೀ ಸ್ಪೂನ್
ಕರಿಯಲು ಎಣ್ಣೆ – ಅಗತ್ಯವಷ್ಟು

ಮಾಡುವ ವಿಧಾನ
ಎಲ್ಲಾ ಪದಾರ್ಥಗಳನ್ನು ಸೇರಿಸಿ, ಸ್ವಲ್ಪ ಸ್ವಲ್ಪವಾಗಿ ನೀರು ಹಾಕುತ್ತಾ ಚಪಾತಿ ಹಿಟ್ಟಿಗಿಂತ ಸ್ವಲ್ಪ ಗಟ್ಟಿಯಾಗಿ ಕಲಸಿ.
ಹಿಟ್ಟನ್ನು ಮುಚ್ಚಿ ಅರ್ಧ ಗಂಟೆ ನೆನೆಸಿಟ್ಟು, ನಂತರ ಚೆನ್ನಾಗಿ ನಾದಿ.
ಹಿಟ್ಟಿನ ಸಣ್ಣ ಸಣ್ಣ ಉಂಡೆಗಳನ್ನು ಮಾಡಿ, ಪ್ರತಿಯೊಂದು ಉಂಡೆಯನ್ನು ಹಪ್ಪಳದಂತೆ ಬಹಳ ತೆಳುವಾಗಿ ಲಟ್ಟಿಸಿ.
ಎಣ್ಣೆಯನ್ನು ಬಿಸಿ ಮಾಡಿ, ಲಟ್ಟಿಸಿದ ಹಪ್ಪಳವನ್ನು ಎಣ್ಣೆಯಲ್ಲಿ ಕರಿಯಿರಿ.
ಕರಿದ ಹಪ್ಪಳಗಳು ಪೂರಿಯಂತೆ ಉಬ್ಬದೆ, ಹಪ್ಪಳದಂತೆ ಚಪ್ಪಟೆಯಾಗಿರಬೇಕು; ಅದಕ್ಕಾಗಿ ಉಂಡೆಗಳನ್ನು ಬಹಳ ತೆಳುವಾಗಿ ಲಟ್ಟಿಸುವುದು ಮುಖ್ಯ.



ಕಾಯಿ ಹಾಲು
ಕಾಯಿ ಹಾಲಿಗೆ ಬೇಕಾಗುವ ಪದಾರ್ಥಗಳು
ತುರಿದ ತೆಂಗಿನಕಾಯಿ – 2 ಕಪ್
ಗಸಗಸೆ – ½ ಕಪ್
ನೆನೆಸಿದ ಗೋಡಂಬಿ – 10
ಕೇಸರಿ ಬಣ್ಣ – ಸ್ವಲ್ಪ
ಏಲಕ್ಕಿ ಪುಡಿ – ಸ್ವಲ್ಪ
ಬೆಲ್ಲ – 1 ಕಪ್

ಮಾಡುವ ವಿಧಾನ
ಮೊದಲು ಗಸಗಸೆ ಮತ್ತು ನೆನೆಸಿದ ಗೋಡಂಬಿಯನ್ನು ಸೇರಿಸಿ ನುಣ್ಣಗೆ ರುಬ್ಬಿ.
ನಂತರ ತುರಿದ ತೆಂಗಿನಕಾಯಿಯನ್ನು ಸೇರಿಸಿ ಮತ್ತೊಮ್ಮೆ ನುಣ್ಣಗೆ ರುಬ್ಬಿ.
ರುಬ್ಬಿದ ಪೇಸ್ಟ್ ನ್ನು ಒಂದು ಪಾತ್ರೆಗೆ ಹಾಕಿ, ಸ್ವಲ್ಪ ನೀರು ಹಾಕಿ, ಬೆಲ್ಲ ಸೇರಿಸಿ ಕುದಿಸಿ.
ಮಿಶ್ರಣ ಕುದಿಯಲು ಬಂದಾಗ ಸ್ವಲ್ಪ ಕೇಸರಿ ಬಣ್ಣವನ್ನು (optional) , ಅಗತ್ಯವಾದ ಷ್ಟು ಏಲಕ್ಕಿ ಪುಡಿ ಸೇರಿಸಿ ಚೆನ್ನಾಗಿ ಕಲಸಿ.
ಈ ಮಿಶ್ರಣ ಹಪ್ಪಳಕ್ಕೆ ಚೆನ್ನಾಗಿ ಅಂಟಿಕೊಳ್ಳುವಷ್ಟು ಗಟ್ಟಿ ಯಾಗಿರಬೇಕು; ತುಂಬಾ ತೆಳುವಾಗಿ ಹರಿಯುವಂತಿರಬಾರದು.
ಮಿಶ್ರಣ ತುಂಬಾ ಗಟ್ಟಿಯಾದರೆ, ಆಗತ್ಯ ವಿದ್ದಷ್ಟು ಕುದಿಸಿದ ಹಾಲು ಸೇರಿಸಿ ಕಲಸಿ.
ಬಡಿಸುವ ಮುನ್ನ ಹಪ್ಪಳವನ್ನು ಕಾಯಿ ಹಾಲಿನಲ್ಲಿ ಮುಳುಗಿಸಿ, ಕಾಯಿ ಹಾಲು ಹಪ್ಪಳಕ್ಕೆ ಚೆನ್ನಾಗಿ ಅಂಟಿಕೊಳ್ಳುವಂತೆ ಮಾಡಿ ನಂತರ ಬಡಿಸಿ.



ವಿಜಯನಾಗಮಣಿ ಎಂ ಎಸ್
ನ್ಯೂ ಜೆರ್ಸಿ

ಚಿಣ್ಣರ ಹಬ್ಬದಡುಗೆ – ಸ್ವಯಂಪಾಕದ ಸಂಭ್ರಮ

ಶ್ರಾವಣ ಮಾಸದಲ್ಲಿ ಆರಂಭವಾಗುವ ಹಬ್ಬಗಳ ಸಂಭ್ರಮ, ಕಾರ್ತೀಕ ಮಾಸದ ಅಂತ್ಯದವರೆಗೂ ನಮ್ಮ ಮನೆಗಳಲ್ಲಿ ಸಡಗರದ ವಾತಾವರಣವನ್ನು ಮೂಡಿಸುತ್ತದೆ. ಮನೆಮನೆಗಳಲ್ಲೂ ಮಕ್ಕಳಿಗೆ ಹಬ್ಬವೆಂದರೆ ವಿಶೇಷ ಉತ್ಸಾಹ ಮತ್ತು ಆಸಕ್ತಿ. ಮಕ್ಕಳು ತಮ್ಮದೇ ರೀತಿಯಲ್ಲಿ ಹಬ್ಬದ ಸಿದ್ಧತೆಗಳಲ್ಲಿ ತೊಡಗಿಸಿಕೊಂಡಾಗ, ಮನೆಯವರೆಲ್ಲರಿಗೂ ಹೆಮ್ಮೆಯ ಭಾವ. ಮನೆಮಂದಿಯೆಲ್ಲರೂ ಒಟ್ಟಾಗಿ ಸೇರಿ ಆಚರಿಸುವ ಹಬ್ಬದ ಸೊಬಗೇ ವಿಶೇಷ. ಕೆಲವರು ಹಬ್ಬದ ತಯಾರಿಯನ್ನು ಹಲವು ದಿನಗಳ ಹಿಂದೆಯೇ ಆರಂಭಿಸುತ್ತಾರೆ. ಅಡುಗೆ, ಪೂಜೆ, ಹೊಸ ಬಟ್ಟೆ, ಉಡುಗೊರೆ, ಅಲಂಕಾರ ಮುಂತಾದವುಗಳಿಗೆ ಬೇಕಾದ ಸಾಮಾನು-ಸರಂಜಾಮುಗಳನ್ನು ಸಿದ್ಧಪಡಿಸುವುದು ಸುಲಭದ ಕೆಲಸವಲ್ಲ. ಆದರೆ ಮನೆಯವರೆಲ್ಲರೂ, ಅದರಲ್ಲೂ ಮಕ್ಕಳು, ಈ ಸಿದ್ಧತೆಯಲ್ಲಿ ಕೈಜೋಡಿಸಿದಾಗ, ಕೆಲಸವೂ ಸರಾಗವಾಗಿ ಸಾಗುತ್ತದೆ, ಸಂಭ್ರಮವೂ ಹೆಚ್ಚುತ್ತದೆ. ಹಬ್ಬದ ದಿನ ಸ್ನಾನದಿಂದ ಪೂಜೆಯವರೆಗೆ ಅನೇಕ ಸಿದ್ಧತೆಗಳಿರುತ್ತವೆ. ಚಿಣ್ಣರೂ ತಮ್ಮ ವಯಸ್ಸಿಗೆ ತಕ್ಕಂತೆ ಜವಾಬ್ದಾರಿಯಿಂದ ಹಲವು ಕೆಲಸಗಳಲ್ಲಿ ಕೈಜೋಡಿಸಬಹುದು. ಅವುಗಳಲ್ಲಿ ಕೆಲವು ತಿಂಡಿ-ತಿನಿಸುಗಳನ್ನು ತಯಾರಿಸುವುದೂ ಒಂದು. ತಾವು ತಯಾರಿಸಿದ ತಿನಿಸನ್ನು ಮನೆಯವರೆಲ್ಲರೂ ಸವಿದು "ಭೇಷ್!" ಎಂದಾಗ, ಮಕ್ಕಳ ಉತ್ಸಾಹ ಮತ್ತಷ್ಟು ಹೆಚ್ಚುತ್ತದೆ. ಇದರೊಂದಿಗೆ ಹಬ್ಬದ ಸಂಪ್ರದಾಯಗಳು ಮತ್ತು ವಿಧಿ-ವಿಧಾನಗಳನ್ನು ತಿಳಿದುಕೊಳ್ಳುವ ಆಸಕ್ತಿಯೂ ಬೆಳೆಯುತ್ತದೆ. ಇಂತಹ ಸಣ್ಣ ಅನುಭವಗಳೇ ಮಕ್ಕಳಲ್ಲಿ "ನಾನೂ ಮಾಡಬಲ್ಲೆ" ಎಂಬ ಆತ್ಮವಿಶ್ವಾಸದೊಂದಿಗೆ, ಸ್ವತಃ ತಮ್ಮ ಕೆಲಸಗಳನ್ನು ಮಾಡಿಕೊಳ್ಳುವ ಆತ್ಮನಿರ್ಭರತೆಯ ಮನೋಭಾವವನ್ನೂ ಬೆಳೆಸುತ್ತವೆ.

ನಮ್ಮ ಚಿಣ್ಣರನ್ನು ಹಬ್ಬಗಳ ಮೂಲಕ ನಮ್ಮ ಸಂಸ್ಕೃತಿಯೊಂದಿಗೆ ಬೆಸೆಯುವ ಉದ್ದೇಶದಿಂದ, ಕೆಲವು ಸರಳ ತಿಂಡಿ-ತಿನಿಸುಗಳ ಪಾಕವಿಧಾನಗಳನ್ನು ನಿಮ್ಮ ಮುಂದೆ ತರಲಾಗಿದೆ. ಚಿಣ್ಣರು ಇವುಗಳನ್ನು ಹಿರಿಯರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ತಾವೇ ತಯಾರಿಸಬಹುದು.

ವಿಶೇಷ ಸೂಚನೆ:

ಮಕ್ಕಳು ಅಡುಗೆ ಮಾಡುವಾಗ ಹಿರಿಯರ ಮೇಲ್ವಿಚಾರಣೆ ಅಗತ್ಯ. ಮಕ್ಕಳ ವಯಸ್ಸಿಗೆ ತಕ್ಕ ಕೆಲಸಗಳನ್ನು ನೀಡಿ, ಅಪಾಯಕಾರಿ ಉಪಕರಣಗಳು ಮತ್ತು ಬಿಸಿಯಾದ ವಸ್ತುಗಳನ್ನು ಮಕ್ಕಳಿಂದ ದೂರವಿರಿಸಿ.



ವಿಜಯನಾಗಮಣಿ ಎಂ ಎಸ್
ನ್ಯೂ ಜೆರ್ಸಿ

ಕೋಸಂಬರಿ

ಬೇಕಾಗುವ ಪದಾರ್ಥಗಳು
ಸೌತೆಕಾಯಿ – 1
ಹೆಸರುಬೇಳೆ – ½ ಕಪ್
ತುರಿದ ಕ್ಯಾರೆಟ್ – ¼ ಕಪ್
ತುರಿದ ತೆಂಗಿನಕಾಯಿ – 2 ಟೇಬಲ್ ಚಮಚ
ನಿಂಬೆಹಣ್ಣಿನ ರಸ – 1 ಟೀ ಚಮಚ
ಉಪ್ಪು – ರುಚಿಗೆ ತಕ್ಕಷ್ಟು
ಕೊತ್ತಂಬರಿ ಸೊಪ್ಪು – ಸ್ವಲ್ಪ



ಚಿತ್ರ ಕೃಪೆ : ಅಂತರ್ಜಾಲ

ಹಿರಿಯರ ಸಹಾಯದಿಂದ :

- ಸೌತೆಕಾಯಿಯನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಕೊಳ್ಳಿ.
- ಕೊತ್ತಂಬರಿ ಸೊಪ್ಪನ್ನು ಸಣ್ಣದಾಗಿ ಕತ್ತರಿಸಿ ಕೊಳ್ಳಿ.
- ಕ್ಯಾರೆಟ್ ಮತ್ತು ಹಸಿ ತೆಂಗಿನಕಾಯಿಯನ್ನು ತುರಿದುಕೊಳ್ಳಿ.
- ಚಿಣ್ಣರು ಮಾಡುವ ವಿಧಾನ
- ಹೆಸರುಬೇಳೆಯನ್ನು ಚೆನ್ನಾಗಿ ತೊಳೆದು ಸುಮಾರು 30 ನಿಮಿಷ ನೀರಿನಲ್ಲಿ ನೆನೆಸಿಡಿ.
- ನೆನೆಸಿದ ಹೆಸರುಬೇಳೆಯ ನೀರನ್ನು ಸಂಪೂರ್ಣವಾಗಿ ಬಸಿದುಕೊಳ್ಳಿ.
- ಒಂದು ಬಟ್ಟಲಿನಲ್ಲಿ ಹೆಸರುಬೇಳೆ, ಕತ್ತರಿಸಿದ ಸೌತೆಕಾಯಿ ಮತ್ತು ತುರಿದ ಕ್ಯಾರೆಟ್ ಹಾಕಿ ಬೆರೆಸಿ.
- ತುರಿದ ತೆಂಗಿನಕಾಯಿ ಮತ್ತು ಸಣ್ಣದಾಗಿ ಕತ್ತರಿಸಿದ ಕೊತ್ತಂಬರಿ ಸೊಪ್ಪನ್ನು ಸೇರಿಸಿ.
- ಉಪ್ಪು ಮತ್ತು ನಿಂಬೆಹಣ್ಣಿನ ರಸವನ್ನು ಸೇರಿಸಿ ನಿಧಾನವಾಗಿ ಮಿಶ್ರಣ ಮಾಡಿ.
- ರುಚಿಯಾದ, ತಾಜಾ ಕೋಸಂಬರಿ ಸಿದ್ಧ!



ವಿಜಯನಾಗಮಣಿ ಎಂ ಎಸ್
ನ್ಯೂ ಜೆರ್ಸಿ

ಸಿಹಿ ಅವಲಕ್ಕಿ



ಚಿತ್ರ ಕೃಪೆ : ಅಂತರ್ಜಾಲ

ಬೇಕಾಗುವ ಪದಾರ್ಥಗಳು

ದಪ್ಪ ಅವಲಕ್ಕಿ – 1 ಕಪ್
ಬೆಲ್ಲ – ½ ಕಪ್ (ರುಚಿಗೆ ತಕ್ಕಂತೆ)
ತುರಿದ ತೆಂಗಿನಕಾಯಿ – ½ ಕಪ್
ಏಲಕ್ಕಿ – 2
ಬಾಳೆಹಣ್ಣು – 1 (ಬೇಕಿದ್ದರೆ)
ಹಾಲು – 2–3 ಟೇಬಲ್ ಚಮಚ (ಬೇಕಿದ್ದರೆ)

ಹಿರಿಯರ ಸಹಾಯದಿಂದ :

- ಬಾಳೆಹಣ್ಣನ್ನು ಸಣ್ಣ ತುಂಡುಗಳಾಗಿ ಕತ್ತರಿಸಿಕೊಳ್ಳಿ.
- ಬೆಲ್ಲವನ್ನು ಕುಟ್ಟಿ ಸಣ್ಣಗೆ ಪುಡಿ ಮಾಡಿಕೊಳ್ಳಿ.
- ಏಲಕ್ಕಿಯನ್ನು ಸಿಪ್ಪೆ ತೆಗೆದು ನುಣ್ಣಗೆ ಪುಡಿ ಮಾಡಿಕೊಳ್ಳಿ.
- ಹಸಿ ತೆಂಗಿನಕಾಯಿಯನ್ನು ತುರಿದುಕೊಳ್ಳಿ.
- ಚಿಣ್ಣರು ಮಾಡುವ ವಿಧಾನ
- ಅವಲಕ್ಕಿಯನ್ನು ನೀರಿನಿಂದ ಎರಡು ಬಾರಿ ಚೆನ್ನಾಗಿ ತೊಳೆದು ನೀರನ್ನು ಬಸಿದುಕೊಳ್ಳಿ.
- ಸ್ವಲ್ಪ ಹಾಲು ಸೇರಿಸಿ 5–10 ನಿಮಿಷ ಮುಚ್ಚಿಡಿ.
- ನೆನೆದ ಅವಲಕ್ಕಿಯನ್ನು ಒಂದು ಬಟ್ಟಲಿಗೆ ಹಾಕಿ, ಪುಡಿ ಬೆಲ್ಲ ಸೇರಿಸಿ ನಿಧಾನವಾಗಿ ಮಿಶ್ರಣ ಮಾಡಿ.
- ಕತ್ತರಿಸಿದ ಬಾಳೆಹಣ್ಣು, ತುರಿದ ತೆಂಗಿನಕಾಯಿ ಮತ್ತು ಏಲಕ್ಕಿ ಪುಡಿ ಸೇರಿಸಿ ಎಲ್ಲವನ್ನೂ ನಿಧಾನವಾಗಿ ಕಲಸಿ.
- ರುಚಿಯಾದ ಸಿಹಿ ಅವಲಕ್ಕಿ ಸಿದ್ಧ!



ವಿಜಯನಾಗಮಣಿ ಎಂ ಎಸ್
ನ್ಯೂ ಜೆರ್ಸಿ



ಚಿತ್ರ ಕೃಪೆ : ಅಂತರ್ಜಾಲ

ಬೇಸನ್ ಲಾಡು (ಪುಟಾಣಿ ಲಾಡು)

ಬೇಕಾಗುವ ಪದಾರ್ಥಗಳು

ಉರಿ ಕಡಲೆ (ಕಡಲೆ ಪೊಪ್ಪು / ಪುಟಾಣಿ) – 1 ಕಪ್
ಸಕ್ಕರೆ – ½ ಕಪ್
ತುಪ್ಪ – ¼ ಕಪ್ (ಅರ್ಧ ಕರಗಿದ್ದು)
ಏಲಕ್ಕಿ – 2

ಹಿರಿಯರ ಸಹಾಯದಿಂದ

ಉರಿ ಕಡಲೆ (ಕಡಲೆ ಪೊಪ್ಪು / ಪುಟಾಣಿ)ಯನ್ನು ಮಿಕ್ಸಿಯಲ್ಲಿ ನುಣ್ಣಗೆ ಪುಡಿ ಮಾಡಿಕೊಳ್ಳಿ
ಸಕ್ಕರೆ ಮತ್ತು ಏಲಕ್ಕಿಯನ್ನು ಮಿಕ್ಸಿಯಲ್ಲಿ ನುಣ್ಣಗೆ ಪುಡಿ ಮಾಡಿಕೊಳ್ಳಿ.
ತುಪ್ಪವನ್ನು ಸ್ವಲ್ಪ ಬೆಚ್ಚಗೆ ಮಾಡಿ ಅರೆ ಕರಗಿದ ಸ್ಥಿತಿಯಲ್ಲಿ ಇಡಿ.

ಚಿಣ್ಣರು ಮಾಡುವ ವಿಧಾನ

- ಒಂದು ಬಟ್ಟಲಿನಲ್ಲಿ ಉರಿ ಕಡಲೆ (ಕಡಲೆ ಪೊಪ್ಪು / ಪುಟಾಣಿ) ಪುಡಿ ಮತ್ತು ಸಕ್ಕರೆ ಪುಡಿ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ.
- ಅರೆ ಕರಗಿದ ತುಪ್ಪವನ್ನು ಸ್ವಲ್ಪ ಸ್ವಲ್ಪವಾಗಿ ಸೇರಿಸುತ್ತಾ ಕೈಯಿಂದ ಚೆನ್ನಾಗಿ ಕಲಸಿ.
- ಮಿಶ್ರಣವನ್ನು ಸಣ್ಣ ಪ್ರಮಾಣದಲ್ಲಿ ತೆಗೆದುಕೊಂಡು ಕೈಯಲ್ಲಿ ಒತ್ತಿ ಉಂಡೆಗಳನ್ನಾಗಿ ಮಾಡಿ.
- ರುಚಿಯಾದ ಬೇಸನ್ ಲಾಡು ಸಿದ್ಧ!

ಕೆಲವು ಉಪಯುಕ್ತ ಸಲಹೆಗಳು:

- ತುಪ್ಪವು ತಣ್ಣಗಿದ್ದು, ತುಂಬಾ ಗಟ್ಟಿಯಾಗಿಯೂ ಅಥವಾ ತುಂಬಾ ಕರಗಿಯೂ ಇರದೆ, ಮೃದುವಾದ ಹದದಲ್ಲಿರಲಿ.
- ತುಪ್ಪವನ್ನು ಒಂದೇ ಬಾರಿಗೆ ಸೇರಿಸದೆ, ಸ್ವಲ್ಪ ಸ್ವಲ್ಪವಾಗಿ ಸೇರಿಸಿ ಕಲಸಿ.
- ಮಿಶ್ರಣವು ಉಂಡೆ ಕಟ್ಟುವಷ್ಟು ಹದ ಬಂದರೆ ತುಪ್ಪವನ್ನು ಸೇರಿಸುವುದನ್ನು ನಿಲ್ಲಿಸಿ.
- ಮಕ್ಕಳು ತಮ್ಮ ಪುಟ್ಟ ಕೈಗಳಿಂದಲೇ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಲಿ.
- ಲಾಡುಗಳನ್ನು ತಯಾರಿಸಿದ ನಂತರ ಸ್ವಲ್ಪ ಸಮಯ ಹಾಗೆಯೇ ಇಟ್ಟು, ನಂತರ ಗಾಳಿಯಾಡದ ಡಬ್ಬಿಯಲ್ಲಿ ಸಂಗ್ರಹಿಸಿ.
- ತಯಾರಾದ ಖಾದ್ಯವನ್ನು ಮಕ್ಕಳೇ ಹಿರಿಯರ ಮಾರ್ಗದರ್ಶನದಲ್ಲಿ ದೇವರಿಗೆ ನೈವೇದ್ಯವಾಗಿ ಅರ್ಪಿಸಿ, ನಂತರ ಮನೆಯವರೆಲ್ಲರಿಗೂ ಹಂಚಿ ಪ್ರಸಾದವಾಗಿ ಸ್ವೀಕರಿಸಿ, ಎಲ್ಲರೂ ಸವಿದು ಸಂತೋಷಪಡಲಿ!

ಮಾಡಿ–ಕಲಿ, ಕಲಿ–ನಲಿ
ಅಡುಗೆಯಿಂದ ಕಲಿಕೆ, ಕಲಿಕೆಯಿಂದ ಆತ್ಮನಿರ್ಭರತೆ!

ಚಿಣ್ಣರ ಲೋಕ






ಚಾರು ದೇವ್






ರಿಯಾನ್ ಮಂಜು ಗೌಡ



ಒಂದು - ೧	10 ೧೦ - ಹತ್ತು
ಎರಡು - ೨	20 ೨೦ - ಇಪ್ಪತ್ತು
ಮೂರು - ೩	30 ೩೦ - ಮೂವತ್ತು
ನಾಲ್ಕು - ೪	40 ೪೦ - ನಲವತ್ತು
ಐದು - ೫	50 ೫೦ ಐವತ್ತು
ಆರು - ೬	60 ೬೦ ಅರವತ್ತು
ಏಳು - ೭	70 ೭೦ ಎಪ್ಪತ್ತು
ಎಂಟು - ೮	80 ೮೦ ಎಂಬತ್ತು
ಒಂಬತ್ತು - ೯	90 ೯೦ ತೊಂಬತ್ತು
ಹತ್ತು - ೧೦	100 ೧೦೦ ನೂರು

ಮಳೆ ಬಂತು ಮಳೆ
ಮಳೆ ಬಂತು ಮಳೆ
ಕೊಡೆ ಹಿಡಿದು ನಡೆ
ಕೊಚ್ಚೆಯಲ್ಲಿ ಜಾರಿ ಬಿದ್ದು
ಬಟ್ಟೆ ಎಲ್ಲ ಕೊಳೆ




ಉಂಡಾಡಿ ಗುಂಡ
ಮದುವೆ ಮನೆಗೆ ಹೋದ
ಹತ್ತು ಲಾಡು ತಿಂದ
ಇನ್ನೂ ಬೇಕು ಅಂದ
ಅಮ್ಮ ಬೆತ್ತ ತಂದ್ರು
ಅಪ್ಪ ದೊಣ್ಣೆ ತಂದ್ರು
ಕೈ ಕಾಲ್ ಬ್ಯಾಡ್ ಮುರಿತ


ಆನೆ ಬಂತೊಂದಾನೆ
ಯಾವೂರಾನೆ
ಬಿಜಾಪುರದ ಆನೆ
ದಾರಿ ತಪ್ಪಿ ಬಂತು
ಕೊಬ್ಬರಿ ಬೆಲ್ಲ ತಿಂತು
ಮಕ್ಕಳಿಗೆಲ್ಲ ಹಂಚ್ತು
ಆನೆ ಓಡಿ ಹೋಯ್ತು...



ವೇದಾಂಶ ರಾಯ್ ಮುತ್ಯಾಲ




ಪಕ್ಕ ಬುಂಕ ಮುಳ
ಮುಳ್ಳ ಬುಂಕ ಮಳ
ಕೂಯಿ ಕುಡಿದು ನಡೆ
ಕೂಳ್ಚಕ್ಕ ರಯಲ್ಲಿ ಬುಂಕಾವಿದ್ದ
ಬಾಟೆಲ್ ರಯಲ್ಲ ಕೂಳೆ
ಬಿಸಿಲು ಬುಂಕ ಬಿಡಲು
ಬಾವಿಯ ಅನಿಟ ಸೇದಿ
ಸೋಪ್ಲು ಹಾಕಿ ಬಿಗಿ





೧ - ಒಂದು
೨ - ಎರಡು
೩ - ಮೂರು
೪ - ನಾಲ್ಕು
೫ - ಐದು
೬ - ಆರು
೭ - ಏಳು
೮ - ಎಂಟು
೯ - ಒಂಬತ್ತ
೧೦ - ಹತ್ತ
೧೧ - ಹನ್ನೊಂದ್ಡ
೧೨ - ಹನ್ನೆರಡ್ಡ
೧೩ - ಹದಿಮೂರ್ಡ
೧೪ - ಹದಿನಲ್ಕ
೧೫ - ಹದಿನೈದ್ಡ
೧೬ - ಹದಿನಾರ್ಡ
೧೭ - ಹದಿನೇಳ್ಡ
೧೮ - ಹದಿನೆಂಟ್ಡ
೧೯ - ಹತ್ತೊಂಬತ್ತ
೨೦ - ಇಪ್ಪತ್ತ
೨೧ - ಇಪ್ಪತ್ತೊಂದ್ಡ
೨೨ - ಇಪ್ಪತ್ತೆರಡ್ಡ
೨೩ - ಇಪ್ಪತ್ತಮೂರ್ಡ
೨೪ - ಇಪ್ಪತ್ತನಲ್ಕ
೨೫ - ಇಪ್ಪತ್ತೈದ್ಡ
೨೬ - ಇಪ್ಪತ್ತಾರ್ಡ
೨೭ - ಇಪ್ಪತ್ತೇಳ್ಡ
೨೮ - ಇಪ್ಪತ್ತೆಂಟ್ಡ
೨೯ - ಇಪ್ಪತ್ತೊಂಬತ್ತ
೩೦ - ಮೂವತ್ತ
೪೦ - ನಲವತ್ತ
೫೦ - ಐವತ್ತ
೬೦ - ಅರವತ್ತ
೭೦ - ಎಪ್ಪತ್ತ
೮೦ - ಎಂಬತ್ತ
೯೦ - ತೊಂಬತ್ತ
೧೦೦ - ನೂರು



ಸುಪ್ರಿಯ ರಾಘವೇಂದ್ರ












ಅಥರ್ವ ಭಾರದ್ವಾಜ್








ಕ್ಯಾಮರಾ ಕಣ್ಣಲ್ಲಿ






ಶ್ರೀವಿದ್ಯಾ ಪ್ರಶಾಂತ್









ಬೃಂದಾವನ ವಾಣಿ ಹಿಂದಿನ ಸಂಚಿಕೆಗಳನ್ನು ಇಲ್ಲಿ ಓದಬಹುದು :
https://brindavana.org/brindavanavani/
















ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ನಮಗೆ ಇಲ್ಲಿ ತಿಳಿಸಿ :

brindavanavani@gmail.com

ಮುಂದಿನ ಸಂಚಿಕೆಯಲ್ಲಿ ಸಿಗೋಣ...